ಅಪರಂಜಿ

ಸೆಪ್ಟೆಂಬರ್
1995

ಕಿಲಿನಗೆಯ ಅಪರಂಜಿ



* ಪ್ರಕಾಶ್
* ಕಮಲಾ ರಾಮಸ್ವಾಮಿ
* ಬಿ. ಎಸ್. ಪ್ರಭಾಕರ್
* ನಂದಿನಿ ಕಾಪಡಿ
* ಕೃಷ್ಣ ಸುಬ್ಬರಾವ್
* ಹಾ. ರಾ.
* ಕಂಭಂ ಕೃಷ್ಣಮೂರ್ತಿ
* ಚಂಚಲಾ ಶ್ರೀಕಂಠಯ್ಯ
* ಶಿವು
* ಹಾ. ರಾ.

ಬಿಡಿ ಪ್ರತಿ: 2 ರೂ. 50 ಪೈ.

ಸಂಪುಟ ೧೨ ಸೆಪ್ಟೆಂಬರ್ ೧೯೯೫ ಸಂಚಿಕೆ ೧೨

ಈ ಸಂಚಿಕೆಯಲ್ಲಿ

ಗೌರವ ಸಲಹೆಗಾರರು :
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ :
ಶಿವಕುಮಾರ್

ಚಂದಾ ವಿವರ :
ಬಿಡಿ ಪ್ರತಿ :
2 ರೂ 50 ಪೈಸೆ
ವಾರ್ಷಿಕ ಚಂದಾ
25 ರೂ.

ಆಜೀವ ಚಂದಾ :
250 ರೂ.

ವಿಳಾಸ :
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಗ್ಗೆ 8 ರಿಂದ
10 ಗಂಟೆಯವರೆಗೆ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು - 560 003

// ಅಪರಂಜಿ
(ತಿಳಿನಗೆಯ ಕಾರಂಜಿ)

ಸಂಪುಟ ೧೨ ಸೆಪ್ಟೆಂಬರ್ ೧೯೯೫ ಸಂಚಿಕೆ-೧೨

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೧೨ ಸೆಪ್ಟೆಂಬರ್ ೧೯೯೫ ಸಂಚಿಕೆ-೧೨

ತತ್ರ ಸ್ಥಿರಸುಖಮಾಸನಮ್

-ಯೋಗದರ್ಶನ

ಯೋಗದ ಅಷ್ಟಾಂಗಗಳಲ್ಲಿ ಮೊದಲನೆಯ ಎರಡು ಯಮ. ನಿಯಮ.

ಮೂರನೆಯದು ಆಸನ. ಪತಂಜಲಿಯು ಆಸನವೆಂದರೇನು ಎಂದು ಹೇಳುತ್ತಾನೆ. ಸ್ಥಿರವಾಗಿಯೂ ಸುಖವಾಗಿಯೂ ಇರುವುದೇ ಆಸನ.

ಎಂದರೆ ಯಾವಾಗ ನನ್ನ ಪದವಿಯು ಉರುಳುವುದೋ ಎಂದು ಚಿಂತಿಸುತ್ತಿರುವುದು ಆಸನವಲ್ಲ. ಅವರಲ್ಲೆಷ್ಟು ಜನವನ್ನು ಈಚೆಗೆ ಎಳೆದೇನು, ಇಲ್ಲಿರುವ ಎಷ್ಟು ಜನ ಸಿಡಿದು ಹೋದಾರು ಎಂದು ಚಿಂತಿಸುವುದು ಆಸನವಲ್ಲ, ಉದಾರೀಕರಣದಿಂದ ಎಲ್ಲವೂ ಎಲ್ಲರಿಗೂ ಸಿಗಲೇಬೇಕು. ಆದ್ದರಿಂದ ನಾನು ಮಾಡಿದ್ದು ಸರಿ ಎಂದು ಹೇಳುತ್ತಾ ದಿನಗಳನ್ನು ದಬ್ಬುವುದು ಆಸನವಲ್ಲ.

ಇರುವಾಗಲೇ ಗೆಬರಿಕೊಳ್ಳೋಣ ; ಚಲ್ತೀಕಾನಾಂ ಗಾಡಿ ; ಇವತ್ತು ಒಂದು ದೇಶ, ನಾಳೆ ಮತ್ತೊಂದು ಎಂದು ಫೇರಿ ಹೋಡೆಯುವುದು ಆಸನವಲ್ಲ. ತನ್ನ ಮನೆಯಲ್ಲಿ ಜನ ತಳಮಳ, ದ್ವೇಷ, ಆತಂಕ, ಅನುಮಾನ, ಭಯಗಳ ಬೆಂಕಿಯಲ್ಲಿ ಬೇಯುತ್ತಿರಲು ಅದ್ಯಾರೋ ನನ್ನನ್ನು ಸಂಪೂರ್ಣವಾಗಿ ಮೆಚ್ಚುತ್ತಾನೆ ಎಂದರೆ ಜನ ಜೀವನಕ್ಕೆ ಸ್ಥಿರತೆಯೂ ಇಲ್ಲ ; ಸುಖವು ಕನಸಿನಲ್ಲೂ ಇಲ್ಲ.

ತನ್ನತನವನ್ನು ಬೆಂಕಿಯಲ್ಲಿ ಹಾಕಿ, ಇಲ್ಲದ ಗಗನ ಕುಸುಮವನ್ನು ಮಾರಲು ಹೋಗುವುದು, ಆಸನವನ್ನು ಸುಖದಾಯಕವಾಗಿಯೂ, ಸ್ಥಿರವಾಗಿಯೂ ಮಾಡಲು ಸಾಧ್ಯವೇ ಇಲ್ಲ.

ಇದನ್ನು ಯಾರಿಗೆ ಹೇಳುತ್ತಿರುವೆ ಎಂದಿರಾ ! thanks.



ಪ್ರಕಾಶ್

ಕಾಂಗ್ರೆಸ್ ಮಾಡಿದ್ದನ್ನೇ ಬಿ.ಜೆ.ಪಿ. ಮಾಡುತ್ತದೆ

—ಗಾಡ್ಗಿಲ್, ಕಾಂಗ್ರೆ ವಕ್ತಾರ

ಚರಿತ್ರೆ ಮರುಕಳಿಸುತ್ತದೆ ಅಂಬುದು ನಿಜ ! !

*　　　*　　　*

ಎನ್ರಾನ್ ಗುತ್ತಿಗೆಗೆ ಯಾರೂ ಲಂಚ ಕೇಳಿಲ್ಲ

—ಎನ್ರಾನ್ ವಕ್ತಾರರು

ಅದು 'ಕೇಳದೆ' ಸಿಗುವ ಏಕೈಕ ವಸ್ತು ! !

*　　　*　　　*　　　*

ಡೊಳ್ಳು ಹೊಟ್ಟೆ ಪೋಲಿಸರ ನಿವೃತ್ತಿ ? ?

-ಸುದ್ದಿ

ಅಡಿಗ-ಪಥ್ಯದ ಪುಸ್ತಕಗಳನ್ನು ಟ್ರೇನಿಂಗ್ ಕಾಲೇಜ್ ಲೈಬ್ರರಿಗೆ ಸೇರಿಸುತ್ತಾರಂತೆ ! !

*　　　*　　　*　　　*

ಪ್ರತಿಭಟನೆಗಳಿಗೆ ರಾಜಕೀಯ ಉದ್ದೇಶ ಅಲ್ಲದೆ ಸಾಂಸ್ಕೃತಿಕ ಉದ್ದೇಶ ಇರುತ್ತಾ ?

—ಶ್ರೀ. ಪಟೇಲ್

ಬಹು ಗಹನವಾದ ಮಾತು ! !

*　　　*　　　*　　　*

ಎನ್ರಾನ್ ಸುದ್ದಿ ಕೇಳಿ ಕೋಜೆಂಟ್ರಿಕ್ಸ್‌ನ ವ್ಯವಹಾರದಲ್ಲಿ ಭಾಗಿಯಾಗಿರುವ ಸತ್ಯಸಂಧರೆಲ್ಲ ನಿಟ್ಟುಸಿರು ಬಿಟ್ಟರಂತೆ ! !

**　　　**　　　**　　　**

"ಕೋಜೆಂಟ್ರಿಕ್ಸ್ ತಿರಸ್ಕರಿಸುವ ಪ್ರಶ್ನೆಯೇ ಇಲ್ಲ"

—ಮುಖ್ಯ ಮಂತ್ರಿಗಳು

"ಮುಂದಿನ ತಿಂಗಳಿಂದ ವಿದ್ಯುತ್ ದರ ಏರಿಕೆ"

-ಸುದ್ದಿ

ಈಗಲಿಂದಲೇ ಜನ ಸಾಮಾನ್ಯರಿಗೆ ತರಬೇತಿ ? ?

* * *

ಸಮಾಜ ವಿಜ್ಞಾನದಲ್ಲಿ ಪ್ರಥಮ ದರ್ಜೆ ಬರಲಿಲ್ಲ ಎಂದು ವಿದ್ಯಾರ್ಥಿಗಳಿ ಹಲ್ಲೆ, ಹಾನಿ.

-ಸುದ್ದಿ

Anti Social ಅಂದರೆ ಇದೇ ಇರಬೇಕು !

* * *

ಸದಸ್ಯರು ಸದನದಲ್ಲಿ ಗಂಭೀರವಾಗಿ ನಡೆಯಲು ಕಲಿಯಬೇಕು

—ಸ್ಪೀಕರ್

ಅರಣ್ಯ ರೋದನ ! !

* * * *

ಮೈಕೆಲ್ ಎಂಬಾತನಿಗೆ 'ಸುಳ್ಳಿನ ಸರದಾರ' ಎಂಬ ಪ್ರಶಸ್ತಿ

—ಫ್ರಾನ್ಸ್ ಸುದ್ದಿ

ಸುದ್ದಿ ಕೇಳಿ ನಮ್ಮ ದೇಶದ ರಾಜಕಾರಣಿಗಳೆಲ್ಲ ಮುಸಿ ಮುಸಿ ನಕ್ಕರಂತೆ ! !

* * *

ಹಕ್ಕಿ-ಪಿಕ್ಕಿ ಜನರ ಮೇಲೆ ದೌರ್ಜನ್ಯ ಆರೋಪ

-ಸುದ್ದಿ

ಪಾಪ, ಅವರನ್ನ ಪಿಕ್ ಮಾಡ ಬಾರದು ! !

* * *

"ದೊಂಗಲುನ್ನಾರು ಜಾಗ್ರತಾ"

ಕಮಲಾ ರಾಮಸ್ವಾಮಿ

ಕಿಟ್ಟಣ್ಣ ಚಿಕ್ಕಪ್ಪ, ಸಾತು ಚಿಕ್ಕಮ್ಮ ತಿರುಪತಿಗೆ ಬಾ ಎಂದು ಕರೆದಾಗ ಎಷ್ಟು ಆನಂದ ವಾಯ್ತು ಅಂತ ! ಪರೀಕ್ಷೆ ಮುಗಿದು ರಜಾ ಹೇಗೆ ಕಳೆಯೋದು ಎಂದು ಒದ್ದಾಡು ತ್ತಿದ್ದ ನನಗೆ ಈ ತಿರುಪತಿ ಪ್ರವಾಸ ವರ ಕೊಟ್ಟಂತೆ ಬಂತು. ಶಾಮು, ಪದ್ದು, ನಾಗು, ಜಯು, ಇವರೊಂದಿಗೆ ತಿರುಪತಿ ರೈಲು ನಿಲ್ದಾಣದಲ್ಲಿ ಇಳಿದಾಗ ಬೆಳಿಗ್ಗೆ ಹತ್ತೂವರೆ ಘಂಟೆ. ಸ್ಟೇಷನ್ನಲ್ಲಿ ಎಲ್ಲಿ ನೋಡಿದರೂ ಕೆಂಪು ಬೋರ್ಡಿನ ಮೇಲೆ ಬಿಳಿಯ ಅಕ್ಷರಗಳಲ್ಲಿ "ದೊಂಗಲುನ್ನಾರು ಜಾಗ್ರತೆ" ಎಂದಿತ್ತು "ಕಿಟ್ಟಣ್ಣ, ಈ ಊರಿನ ತುಂಬಾ ಕಳ್ಳರು, ಠಕ್ಕರು ತುಂಬಿದ್ದಾರೆ ಅಂತ ಕಾಣುತ್ತೆ. ನೋಡು, ಕಂಬಕ್ಕೊಂದು ಬೋರ್ಡು" ಎಂದೆ.

"ಹೌದು ಹೌದು" ಈ ಊರಿಲ್ಲಿ ದೇವ್ರ ಹೆಸರಿನಲ್ಲಿ ನಡೆವ ಸುಲಿಗೆಯು ಮುನ್ನೆ ಚ್ಚರಿಕೆ ಇರ್ಬೇಕು" ಕಿಟ್ಟಣ್ಣ ದೊಡ್ಡ ಧ್ವನಿಯಲ್ಲಿ ಹೇಳಿದ. ಕಿಟ್ಟಣ್ಣನ ಕಂಠ ಅಂದ್ರೆ ದೇವ್ರು ಕೋಣೆ ಶಂಖ.

"ದೇವ್ರ ಸ್ಥಳಕ್ಕೆ ಬಂದು ಯಾಕೆ ಹೀಗೆ ಮಾತಾಡೀ್ತರಾ ?" ಚಿಕ್ಕಮ್ಮ ರೇಗಿದ್ರು. ಎಲ್ರೂ ಛತ್ರಕ್ಕೆ ಹೋದೆವು.

ಅಂದು ಶುಕ್ರವಾರ, ಸಂಜೆ ಬೆಟ್ಟದ ಕೆಳಗಿನ ದೇವಸ್ಥಾನಗಳನ್ನೆಲ್ಲಾ ನೋಡಿ ದೆವು. "ನಾಳೆ ಬೆಳಿಗ್ಗೆ ಮೊದಲ ಬಸ್ಸಿಗೆ ಮೇಲೆ ಹೋಗೋಣ. ಶನಿವಾರ ತಿರು ಪತಿ ವೆಂಕಟರಮಣಸ್ವಾಮಿ ದರ್ಶನ ಮಾಡ್ಬೇಕು, ಎಷ್ಟು ದಿನದ ಹರಕೆ ಇದು ! ಸ್ವಾಮಿ ಈಗ ಕಣ್ಣು ಬಿಟ್ಟು ನೋಡಿದ" ಸಾತು ಚಿಕ್ಕಮ್ಮ ಧನ್ಯಳಾದೆ ಎನ್ನುವಂತೆ ಹೇಳಿದ್ರು. "ಅಮ್ಮಾ ! ನಾಳೆ ನಂಗೆ ಪೂರ್ತಿ ಬೋಡು ಮಾಡ್ಸಬೇಡ, ಬರಿಯ ಸಮ್ಮರ್ ಕ್ರಾಪ್ ಮಾಡ್ಸಿದ್ರೆ ಆಗ್ದೆ" ಶಾಮು ಅಲವತ್ತುಗೊಂಡ.

"ಹೂಂ ಈ ಪೆದ್ದ ಬಡ್ಡಿ ಗಂಡಿಗೆ ಶೃಂಗಾರ ಬೇರೆ ಕೇಡು; ತೆಪ್ಗೆ ತಲೆ ಮೊಟ್ಟೆ ಹೊಡಸ್ಕೊ !" ರೇಗಿದ ಚಿಕ್ಕಪ್ಪ.

"ಇಲ್ಲ ಕಣೋ ಮರಿ. ನಿಂಗೆ ಇಲ್ಲಿ ಮುಡಿ ಕೊಡ್ಸಲ್ಲ" ಚಿಕ್ಕಮ್ಮ ಅಶ್ವಾಸನೆ ಇತ್ತರು.

"ಅಲ್ವೇ ! ತಿರುಪತೀಲಿ ಮುಡಿ ಕೊಡಸ್ತೀನಿ ಅಂತ ಹರಕೆ ಹೊತ್ಕೊಂಡಿದ್ದೀನಿ. ಕರಕೊಂಡು ಹೋಗಿ ಅಂತ ಒಂದೇಸಮನೆ ಪ್ರಾಣ ಹಿಂಡಿದೆ. ಈಗ ಬೇಡ ಮರಿ ಅಂತೀಯಲ್ಲಾ, ಅಷ್ಟೊಂದು ಖರ್ಚು ಮಾಡಿಕೊಂಡು ಬಂದ್ಮೇಲೆ ?

"ಛತ್ರದಲ್ಲಿರೋರು ಹೆದ್ರಾರು, ಸಮ್ನೆ ಕೂಗಬೇಡಿ. ಹೊರಡಕ್ಕೆ ಮುಂಚೆ ಅತ್ತಿಗೆಮ್ಮ. ಭಾವಯ್ಯನಿಗೆ ಹೇಳಿ ಬರೋಣ ಅಂತ ಹೋದಾಗ ಅವ್ರೇನಂದ್ರು ಗೊತ್ತೇ ? ತಿರುಪತಿ ದೇವರಿಗೆ ನಮ್ದು ಕಳ್ಕೊಕ್ಕಲು, ಹರಕೆ ಅಲ್ಲಿ ಸಲ್ಲಲ್ಲ. ನಮ್ಮನೆಗೆ ಆಗಿ ಬಂದಿರೋದು ನಂಜನಗೂಡು, ಅಲ್ಲಿ ಮುಡಿ ಕೊಡ್ಸಿ. ವೆಂಕಟ ರಮಣನ ಹುಂಡಿಗೆ ತಪ್ಪು ಕಾಣಿಕೆ ಹಾಕಿ ತಿಮ್ಮಪ್ಪನ ದರ್ಶನ ಮಾಡಿಕೊಂಡು ಬನ್ನಿ. ಹೂಂ ! ಅಂದ್ಹಾಗೆ ಬೆಟ್ಟ ಹತ್ತುವಾಗ ಬೇರೊಬ್ಬರ ಊಳಿಗನಾಗಿ, ಅಂದ್ರೆ ಇನ್ನೊಬ್ಬರ ಗಂಟು ಮೂಟೆ ಹೊತ್ತು ಹೋಗ್ಬಹುದು. ಅದಕ್ಕೇ ಕಳ್ಕೊಕ್ಕಲು ಅನ್ನೋದು "ಅಂತ ಬಿಡ್ಸಿ ಹೇಳಿದ್ರು, ಸಧ್ಯ ; ಕೇಳಿದ್ದು ಒಳ್ಳೇದಾಯ್ತು".

"ಹಾಗದ್ರೆ ತಿರುಪತಿ ಕ್ಷೌರ ಆಗಿದ್ದು ನಂಗೆ" ಕಿಟ್ಟಣ್ಣ ಉದ್ಗರಿಸಿದ.

"ನಾಳೆ ಬೆಟ್ಟಕ್ಕೆ ಹೋಗುವಾಗ ಯಾರದ್ದಾದರೂ ಗಂಟು ಹಿಡಿಯುಲು ಜ್ಞಾಪಸ್ತೇನೆ ಇಷ್ಟಟ್ಟು ಎಲ್ಲಾ ಮಲ್ಗಿ", ಸಾತು ಚಿಕ್ಕಮ್ಮ ಚಾಪೆ ಮೇಲೆ ಮಲಗ್ತಾ" ರಾಮು, ರಾಜೀವಲೋಚನ ಅಂದ್ರು.

ಬೆಳಿಗ್ಗೆ ಎಲ್ಲಾ ಬೇಗ ಎದ್ದು ತುಂಬಾ ಉತಾಹದಿಂದ ಬಸ್ ಸ್ಟಾಂಡಿಗೆ ಹೊರಟ್ವಿ ನಮ್ಮೊಂದಿಗೆ ಒಂದು ಶೆಟ್ಟರ ಸಂಸಾರವೂ ಹೊರಟಿತ್ತು. ಅವರುಗಳು ಬೇಕಾದಷ್ಟು ಬುಟ್ಟಿ. ಬ್ಯಾಗೂ, ಸೂಟ್‌ಕೇಸ್, ಟ್ರಂಕ್ ಎಲ್ಲಾ ತಂದಿದ್ರು. ಬಸ್ಸು ಹತ್ತುವಾಗ ಅವರ ಸಾಮಾನುಗಳನ್ನು ಏರಿಸಲು ಕಿಟ್ಟಣ್ಣ ಸಹಾಯ ಮಾಡಿ "ಕೂಲಿ ಕೆಲ್ಸ ಮಾಡಿದ್ದೇನೆ ಕಣೆ" ಎಂದು ಚಿಕ್ಕಮ್ಮನಿಗೆ ಹೇಳಿ ಬಸ್ಸು ಹತ್ತಿದ್ರು. ಬಸ್ಸು ಹೊರಟಿತು. ತಂಗಾಳಿ ಬೀಸುತ್ತಿತ್ತು. ಆಗ ತಾನೆ ಉದಯಿಸಿದ್ದ ಸೂರ್ಯನ ಹೊಂಗಿರಣಗಳಲ್ಲಿ ಮಿಂದು ನಿಂತ ಮರ, ಗಿಡಗಳು, ತೇಲಿ ಹೋಗುತ್ತಿದ್ದ ಮೋಡಗಳು-ಬಹಳ ರಮಣೀಯುವಾಗಿತ್ತು. ಬಸ್ಸು ಬೆಟ್ಟದ ಮೇಲೆ ಬಂದು ನಿಲ್ಲುವ ಹೊತ್ತಿಗೆ ಚಿಕ್ಕಮ್ಮ ಜ್ಞಾಪಿಸಿದರು. "ನೋಡಿ ! ಯಾರದ್ದಾದ್ರೂ ಗಂಟು ತಗೊಳ್ಳಿ ಕೈಗೆ"

ಕಿಟ್ಟಣ್ಣನಿಗೆ ಭಾಷೆ ಬರದು, ಪಕ್ಕದಲ್ಲಿ ಕೂತಿದ್ದ ಶೆಟ್ರು ಭಾರಿ ಕುಳವೇ ಇರ್ಬೇಕು. ಆತನ ಭಾಡರ್ಯೆ ಹೇರಿಕೊಂಡಿದ್ದ ಒಡ್ವೆಗಳಿಂದ ತಿಳೀತಿತ್ತು. ಆಕೆ ಕೈಲಿದ್ದ ಚೀಲವನ್ನು ಕಿಟ್ಟಣ್ಣ ನೋಡಿ" ಆ ಬ್ಯಾಗ್ ನನ್ನ ಕೈಗೆ ಕೊಡಿ. ಬರ್ತೇನೆ "ಅಚ್ಚ ಕನ್ನಡದಲ್ಲಿ ಹೇಳಿದ್ರು.

"ಏಮಿ ? ಏಮಿ ಕಾವಾಲಿ ? ಆಕೆ ಗೊಗ್ಗರು ಧ್ವನಿಯಲ್ಲಿ ಕೇಳಿದ್ರು. ಬರ್ದೇ ಇದ್ದ ತೆಲಗಿನಲ್ಲಿ ಕಿಟ್ಟಣ್ಣ ತೊದಲುತ್ತಾ "ಮೇಮು ದೊಂಗಲು, ಆ ಬ್ಯಾಗ್ ಕಾವಾಲಿ" ಎಂದ್ರು (ನಾವು ಕಳ್ಳರು. ಆ ಬ್ಯಾಗ್ ಬೇಕು) "ದೊಂಗ ಕೊಡುಕಾ ! ವೆಧವಾ" ನೇನು ದೊಂಗ ಅನ್ನಿ ಚಪ್ಪಿ ಬ್ಯಾಗು ಕಾವ್ಲಾಲಿ ಅಂಟಾವಾ" ಅನ್ನುತ್ತಾ ಎದ್ದು ಬಂದ್ರು ಶೆಟ್ರು.

ಸುತ್ತ ಮುತ್ತ ಇದ್ದವರೆಲ್ಲಾ ಎದ್ದು ಬಂದ್ರು. ಎಲ್ಲಾ ತೆಲುಗಿನಲ್ಲಿ ಶುರು ಮಾಡಿದರು. "ನೋಡುಕ್ಕೆ ಜಂಟಲ್ ಮನ್ ತರಹ ಕಾಣ್ತಾನೆ, ಮಾಡೋ ಕೆಲ್ಸ ನೋಡು ! "ಹಾಕಿ ನಾಲ್ಕು, ಬುದ್ಧಿ ಬರುತ್ತೆ" ಅವನು ಸಾಮಾನು ಹಾಕುಕ್ಕೆ ಸಹಾಯ ಮಾಡಿದಾಗಲೇ ಅನ್ಕೊಂಡೆ" ತಲೆಗೊಂದು ಮಾತು, ಮಾತಿಗೊಂದು ಏಟು ಗುದ್ದು ಜನ ಸೇರಿ, ಗದ್ದಲ ಕಂಡು ಸಾತು ಚಿಕ್ಕಮ್ಮ ಗಟ್ಟಿಯಾಗಿ ಚೀರಿದ್ರು. ಪುಣ್ಯ ಚೆನ್ನಾಗಿತ್ತು. ಅಲ್ಲೇ ಇದ್ದ ದಕ್ಷಿಣ ಕನ್ನಡದವರು ಕಿಟ್ಟಣ್ಣನನ್ನು ಬಿಡ್ಸಿ ''ಏಕೆ ಮಾರಾಯ ! ಏನಾಯ್ತು" ಎಂದ್ರು. ಚಿಕ್ಕಮ್ಮ ಎಲ್ಲಾ ಕಥೆ ಹೇಳಿದ್ರು,

ಈಗಲು ಕಿಟ್ಟಣ್ಣನನ್ನು ಕಂಡಾಗ ''ದೋಗಲುನ್ನಾರು ಜಾಗ್ರತೆ'' ಅನ್ನದೇ ಇರುವುದಿಲ್ಲ.

ಚದುರಂಗ

ಈ ಚದುರಂಗದಾಟದಲಿ, ನಲ್ಲೆ,
ನೀ ನನ್ನ ಮೀರಿಸ ಬಲ್ಲೆ !
ರಾಣಿಯತ್ತ ನನ್ನೊಲವು,
ರಾಜನತ್ತ ನಿನ್ನೊಲವು,
ಆದರೂ. ರಾಜನ ಗೆದ್ದೊಡಲ್ಲವೇ
ಈ ಚದುರಂಗದಿ ಗೆಲವು ? ?

ರಾ. ಪು. ನಂ.

ಬೇಸ್ತು

-ಬಿ. ಎಸ್. ಪ್ರಭಾಕರ್.

"ರೀೀ... ನಿಮ್ ಫ್ರೆಂಡು... ಪಾಪಾರೀ... ಹೀಗಾಗ್ಬಾರ್ದಾಗಿತ್ತು. ಎಷ್ಟ್ ಒಳ್ಳೇರಾಗಿದ್ರು ಅಲ್ವಾರೀ ?" ಅಂತ ಏನೋ ಒಂಥರಾ ಕುತೂಹಲ ಹುಟ್ಟಿಸಿದಳು ನನ್ ಅರ್ಧಾಂಗಿ.

"ಯಾರ್ಗೆ ಏನಾಯ್ತೇ ?" ಅಂತ ಅಷ್ಟೇ ಆತುರವಾಗಿ ಪ್ರಶ್ನಿಸಿದೆ, ಅವಳ 'ಅರ್ಧಾಂಗ'ವನಾದ ನಾನು.

"ಅದೇ ರೀ, ಅಯ್ಯೋ ಅವ್ರೇ ರೀ... ಪಾಪ. ಅಂಥಾ ಸಾಯೋ ವಯಸ್ಸೇನಾಗಿರ್ಲಿಲ್ಲ ಅಲ್ವಾರೀ ?" ಅಂತ ಪುನಃ ಅರ್ಧಕ್ಕೇ ವಿಷ್ಯ ನಿಲ್ಲಿಸಿದಳು ನನ್ ಅರ್ಧಾಂಗಿ.

ನಂಗೆ, ನನ್ನ ಭಾಗದ ಮೈ ಪರಚಿಕೊಳ್ಳಲಿ" ಅನ್ನೋಷ್ಟು ಸಿಟ್ಟು ಬಂತು. "ಥತ್ ತೆರಿಕೆ ! ಯಾರ್ಗೇನಾಯ್ತು ಅಂತ ಹೇಳೆ ಅಂದ್ರೇ, ಕಾಕಮ್ಮ ಕಣಿ ಒದರ್ತಿಯಲ್ಲೇ. ಅದೇನ್ ಹೇಳ್ಬೇಕು ಅಂತಿದಿಯೋ ಅದನ್ನ ನೇರ್ವಾಗಿ ಬಗ್ಳು ಬೇಗ, ಓಗೇನಾ ಸ್ಕೂಲ್‌ಲಲ್ಲಿ ಮಕ್ಕಿಗೆ ಪಾಠ ಮಾಡ್ತಾ ಇರೋದು ನೀನು" ಅಂತ ರಾಚಿದೆ.

"ಬಗ್ಳೋಕೆ ನಿಂಹಾಗೆ ನಾಯಲ್ಲ ನಾನು. ಇಷ್ಟೊಂದು ರೋಪ್ ಹಾಕಿದ್ರೆ, ನಾ ಹೇಳೋದೇ ಇಲ್ಲ. ಏನೋ ಪಾಪ ನಿಂಫ್ರೆಂಡ್ ಅಲ್ವಾ ಅಂತ, ಹೇಳೋಣಾ ಅಂತಿದ್ದೆ, ಹೋಗ್ಲಿ ಬಿಡಿ" ಅಂತ, ಹಲ್ಲು ಅಗೀತಿರೋ ಒಂಟೆ ಮೂತಿ ಥರ ಬಾಯಾಡಿಸಿ ಹಂಗಿಸಿದಳು.

ನಂಗೆ ಜಾಲಿ ಮುಳ್ಳಿಂದ ಪರಚಿಕೊಳ್ಳೋಷ್ಟು ರೇಗಿತು. ಆದರೆ ತಾಜಾ ರೋಪ್ ಹಾಕೋಕೆ ಇದು ಸಮಯವಲ್ಲ ಅಂತ, ಮುಗುಳುನಗೆಗಾಗಿ ತಿಣುಕಿ ತಿಣುಕಿ ಹೇಳಿದೆ "ಸಾರಿ ಡಿಯರ್, ತಪ್ಪಾಯ್ತು. ನನ್ ಭಾಗದ ಕೆನ್ನೆಗೆ ನಾಲ್ಕು ಬಿಗಿಬೇಕಾದ್ರೆ. ಯಾರು ತೀರೋಗಿರೋದು, ದಮ್ಮಯ್ಯ ಅಂತೀನಿ ಹೇಳೇ ಪ್ಲೀಜ್" ಅಂತ "ನೈಸ್" ಮಾಡ್ದೆ.

ನಾನು ಸೋತಿದ್ದನ್ನ ಕಂಡು ಹರ್ಷಚಿತ್ತಳಾಗಿ, ವರವು ನೀಡುವ ದೇವತೆ ಯಂತೆ ಕೈಬಾಯ್ ಆಡಿಸಿ "ಹಾಗ್ಬನ್ನಿ ದಾರಿಗೆ ; ತೀರ್ಕೋಗಿರೋದು ನಿಂಫ್ರೆಂಡ್. ಅದೇ ರೀ ಅವ್ರು ಹೆಸ್ರು, ಹೆಸ್ರು, ನಾಲ್ಗೆ ತುದೀ ಮೇಲೇ ಇದೆ, ಈಚ್ಗೆ ಬರ್ತ್ವಲ್ಲು. ಹೋಗ್ಲಿ ಬಿಡಿ. ಅದೇ ರೀ ನಿನ್ನೆ ಗಂಡಹೆಂಡ್ತೀ ಇಬ್ರೂ "ನಾಡಿದ್ದು ಗೃಹಪ್ರವೇಶ ಇಟ್ಕೊಂಡಿದೀವಿ ಖಂಡಿತ್ ಬರ್ಬೇಕು ಅಂತ ಕರ್ದ್ಹೋದ್ರಲ್ಲ, ಅತಾನೇ ರೀ ಪಾಪ. ಆವ್ರೇನೋ ಹಾಯಾಗಿ ಕಣ್ಮುಚ್ಕೊಂಡ್ರು. ಹೆಂಡ್ತಿ ಮಕ್ಳಗತಿ ಏನ್ರೀ ಅಲ್ವಾ ರೀ ? ಪಾಪ ಒಳ್ಳೆ ಲಕ್ಷ್ಮೀ ಥರ ಇದ್ರು. ಮುತ್ತೈದೆ ವರ್ಚಸ್ಸು ಮುಖ್ದಲ್ಲಿ ಎತ್ತೆತ್ತಿ ಕಾಣೋದು ಪಾಪ" ಅಂತ ಪೇಚಾಡಿಕೊಂಡಳು.

ನನ್ನ ಬಾಲ್ಯದ ಗೆಳೆಯನಿಗೆ ಒದಗಿದ ದುರ್ಮರಣದ ಸುದ್ದಿ ಕೇಳಿ ನಂಗೆ ಶಾಕ್ ಹೊಡೆದಂತಾಯಿತು. ಕ್ಷಣ ಕಾಲ ಮಂಕಾಗಿ ಕೂತು ಬಿಟ್ಟೆ. ಆನಂತರ ಸಾವರಿಸಿ ಕೊಂಡು ಬೇಗೆ ರೇಡಿಯಾಗು ಹೋಗಿ ನೋಡ್ಕೊಂಡು ಬರೋಣ" ಅಂತ ಹೇಳಿ, ಹಳೇ ಶರ್ಟ್ ಹಳೇ ಹವಾಯ್ ಚಪ್ಲಿ ಹಾಕೊಂಡು, ಆಚೆ ಬಂದು ಅರ್ಧಾಂಗಿಗಾಗಿ ಕಾಯುತ್ತ ನಿಂತೆ.

ಒಂದೆರಡು ನಿಮಿಷಗಳಾದ ಮೇಲೆ ನನ್ನಾಕೆ ಬಾಗಿಲಿನಿಂದಾಚೆಗೆ ತಲೆ ಒಡ್ಡಿ "ರೀ...ಇದೇ ಸೀರೆ ಸಾಕೋ ಬೇರೆ ಸೀರೆ ಉಟ್ಕೊಳ್ಳೋ ರೀ ?" ಅಂತ ಕೇಳಿದಳು. ಏನೋ ಮಹಾ ಎಲ್ಲದಕ್ಕೂ ನನ್ನ ಕೇಳೇ ಮಾಡ್ತಾಳೆ ಅನ್ನೋ ಹಾಗೆ.

ನಂಗೆ ಕೋಪ ನೂರೆಂಟು ಡಿಗ್ರಿಗೆ ಏರಿತು. "ಈ ಸೀರೆ ಬೇಡ. ನಿಮ್ಮಜ್ಜಿ ಬಿಟ್ಕೊಂಡ್ಹೋಗಿದಾರಲ್ಲ ಬುಟ್ಟಾಸೀರೆ, ಅದನ್ನ ಉಟ್ಕೊ. ಸಾಕ್ಬಾರೆ ಕಂಡಿದೀನಿ, ಹೋಗ್ತಾ ಇರೋದು ಫಿಲಂ ಆ್ಯಕ್ಟರ್ಸ್ ಫ್ಯಾಶನ್ ಶೋ ನೋಡೋಕಲ್ಲ" ಅಂತ ಗದರಿಸಿದೆ.

"ಏ......ನಿಂದೊಂದು ಎಲ್ಲಾದಕ್ಕೂ ರಾಮಾಯ್ಣ. ಏನೋ ಕೇಳ್ದೆ ಅದ ಕ್ಯಾಕೆ, ಪಾಪ ಸತ್ತು ಸ್ವರ್ಗದಲ್ಲಿರೋ ಅಜ್ಜೀ ತಾತನ್ನ ಕರೀತೀರಿ, ಮಹಾ ಅಲ್ಲಿ, ಅವ್ರು ಬಿಟ್ಕೊಂಡ್ಹೋಗಿರೋದೇ ಗತಿ ನಂಗೆ. ನಿಂಯೋಗ್ಯತೆ ಒಂದೊಳ್ಳೆ ಒಡ್ವೆ ಕಾಣೆ ಒಂದೊಳ್ಳೆ ಸೀರೆ ಕಾಣೆ. ಹೋಗ್ಲಿ ಈಗ್ಯಾಕೆ ಆ ಮಾತು, ನಡೀರಿ ಈಗ ಬಂದೆ, 'ಮನೆ ಕಡೆ ಜೋಪಾನ' ಅಂತ ಮಕ್ಕಿಗೆ ಹೇಳ್ಬಿಟ್ಟು ಬರ್ತೀನಿ ಅಂತ ಪುನಃ ಒಳಗೆ ಹೋದಳು.

ನಂಗೆ ಸಿಟ್ಟು ನೆತ್ತೀಗೇರಿತು. ಕಾಲನ್ನು ಬಲವಾಗಿ ನೆಲಕ್ಕೆ ಝಾಡಿಸಿದೆ. ಇದರ ಪರಿಣಾಮ, ಶಿಥಿಲವಾಗಿದ್ದ ಹಾವಾಯ್ ಚಪ್ಪಲಿಯ ಪಟ್ಟಿ ಕಿತ್ತು ಅಷ್ಟು ದೂರಕ್ಕೆ ಹಾರಿ ಬಿತ್ತು. ಕೋಪ ತಡೆದು ಕೊಳ್ಳಲಾಗದೆ "ಥತ್ ನನ್ಮಗಂದೆ" ಅಂತ ಶಪಿಸಿ, ಇನ್ನೊಂದು ಕಾಲಿನ ಚಪ್ಪಲಿಯನ್ನು ಪಕ್ಕಕ್ಕೆ ಝಾಡಿಸಿದೆ.

ಇಷ್ಟರಲ್ಲಿ ಮನೆ ಮುಂದೆ ಸ್ಕೂಟರ್ ಒಂದು ಸರ್ರ್‍ನೆ ಬಂದು ನಿಂತಿತು. ಬಂದವರು ಯಾರಿರಬಹುದು ಅಂತ ಹಿಂತಿರುಗಿ ನೋಡಿದೆ. ಕ್ಷಣಾರ್ಧದಲ್ಲಿ ನನ್ನ ಹೃದಯದ ಬಡಿತ ಏರುಪೇರಾಯಿತು.

"ಅಯ್ಯೋದೇವ್ರೇ ಬದ್ಕಿರೋರ್ನ ಸಾಯ್ಸಿಬಿಟ್ಟಲ್ಲ" ಅಂತ ಮನಸಿನ್ನಲ್ಲೇ ಪೇಚಾಡಿಕೊಂಡು "ಬಾರಯ್ಯ ಶಾಮಣ್ಣ, ಏನ್ಸಮಾಚಾರ ?" ಅಂತ ಪ್ರಶ್ನಿಸಿದೆ.

ಶಾಮಣ್ಣ ಸ್ಕೂಟರ್‌ನಿಂದ ಇಳಿಯದೆ "ಶಂಕ್ರು, ನಿಂ ಮನೇಲಿರೋ ನೀರ್ ಸೇದೋ ಹಗ್ಗಾನ ಸ್ವಲ್ಪ ಕೊಟ್ಟಿರಯ್ಯ. ನಾಳೆ ಫಂಕ್ಷನ್ ಆದ್ಮೇಲೆ, ವಾಪಸ್ ಕಳಿಸ್ತೀನಿ" ಅಂತ ಕೇಳ್ದ.

"ಧಾರಾಳ್ವಾಗಿ ತೊಗೊಂಡ್ಹೋಗಯ್ಯ. ಅಲ್ಲೇ ನಿಂತ್ಕಲ್ಲ, ಒಳ್ಗೆ ಬಾರಯ್ಯ, ಕೊಡ್ತೀನಿ" ಅಂತ ಆಹ್ವಾನಿಸಿದೆ.

ಶಾಮಣ್ಣ ಒಳಗೆ ಬರಲು ನಿರಾಕರಿಸಿ, "ಇಲ್ಲಿ ಶಂಕ್ರು ಕೈತುಂಬ ಕೆಲ್ಸ ಇದೆ, ಒಂದ್ನಿಮ್ಷ ಪುರಸ್ತು ಇಲ್ಲಯ್ಯ." ಅಂತ ಹೇಳಿ, ಅನಂತರ ಪಿಲಿಯನ್ ಮೇಲೆ ಕೂತಿದ್ದ ಕೂಲಿ ಹುಡುಗನಿಗೆ "ಹೋಗೋ, ಹಗ್ಗ ಕೊಡ್ತಾರೆ ಇಸ್ಕೊಂಡ್ಬಾ" ಅಂತ ಸೂಚಿಸಿದ.

ಅದೇ ಸಮಯಕ್ಕೆ, ನನ್ನ ಅರ್ಧಾಂಗಿ ರೆಡಿಯಾಗಿ ಆಚೆಗೆ ಬಂದು ಶಾಮಣ್ಣನನ್ನ ಪ್ರತ್ಯಕ್ಷವಾಗಿ ಕಣ್ಣಾರೆ ಕಂಡು "ರೀ... ಏನ್ರೀ ಇದು ಆಶ್ಚರ್ಯ ? ನಂಬೊಕೇ ಆಗ್ತಿಲ್ಲ," ಅಂತ ಪಿಸುಗುಟ್ಟಿ, ಬವಳಿ ಬಂದವಳಂತೆ ಹತ್ತಿರದ ತೆಂಗಿನ ಮರವನ್ನು ಒರಗಿ ನಿಂತಳು .–ಬಂದಿರುವವರು ಮನುಷ್ಯರೋ ಅಥವ ದೆವ್ವವೋ ಎನ್ನುವಂತೆ.

"ಥತ್ ನಿನ್ನ, ಬ್ರೈನ್ ಇದ್ಯಾ ನಿಂಗೆ ?" ಅಂತ ಮೆಲ್ಲಗೆ ಅವಳನ್ನ ಗದರಿಸಿದೆ.

ಇಷ್ಟರಲ್ಲಿ ಕೂಲಿ ಹುಡುಗ ಹಗ್ಗ ತೆಗೆದು ಕೊಳ್ಳುವುದಕ್ಕೋಸ್ಕರ, ನಮ್ಮ ಬಳಿಗೆ ಬಂದು ತಲೆ ಕೆರೆದು ಕೊಳ್ಳುತ್ತಾ ನಿಂತ.

ತಕ್ಷಣ, ನನ್ನಾಕೆ ಹುಡುಗನ ರಟ್ಟೆ ಹಿಡಿದು ಬಲವಾಗಿ ಅಲುಗಿಸುತ್ತಾ "ನೋಡ್ರೀ, ಈ ರ್‍ಯಾಸ್ಕಲ್ಲೇ ರೀ ಹೇಳಿದ್ದು ನಾಲ್ಕು ತದ್ಕಿ ಬಾಯಿ ಬಿಡ್ಸಿ, ಯಾಕೆ ನಿಂಫ್ರೆಂಡ್ ಶಾಮಣ್ಣೋರ್ಮೇಲೆ ಹೇಳ್ಬಾರದ್ದನ್ನ ಹೇಳ್ದ?" ಅಂತ ನಾಲ್ಕು ಮನೆಗೆ ಕೇಳ್ಸೋ ಅಷ್ಟು ಜೋರಾಗಿ ಅರಚಿದಳು.

ನನ್ನ ಹೆಂಡತಿಯ ಉದ್ವೇಗದ ಕೂಗಾಟವನ್ನು ಕೇಳಿಸಿ ಕೊಂಡ ನನ್ನ ಫ್ರೆಂಡು, ಸ್ಕೂಟರ್ ನಿಲ್ಲಿಸಿ, ಹುಡುಗನ ಹತ್ತಿರಕ್ಕೆ ಬಂದು "ಭಡ್ವ...ಏನ್ಮಾಡ್ದಿಯೋ ?" ಅಂತ ಕೋಪದಿಂದ ವಿಚಾರಿರಿದ.

ಹುಡುಗನಿಗೆ ಏನೂ ಅರ್ಥವಾಗಲಿಲ್ಲ, ಭಯದಿಂದ ಅಳೋಕೆ ಶುರು ಮಾಡಿದ.

ನನ್ನಾಕೆ ಹೆದರಲಿಲ್ಲ. ಆವೇಶದಿಂದ "ನೋಡೀ...ಇವ್ರೇ... ಸ್ವಲ್ಪ ಹೊತ್ತಿಗ್ಮುಂಚೆ, ಇವ್ನೆ, ನಂಗೆ ಚೆನ್ನಾಗಿ ಗುರ್‍ತಿದೆ, 'ಶಾಮಣ್ಣಾಗೆ ಬೆಂಕಿ ಬಿದ್ದೀ, ಖತಮ್ ಹೋಗಯ' ಅಂತ ನಂ ಮನೇ ಮುಂದೇನೇ ಅರ್‍ಕೊಂಡು ಓಡ್ಹೋದ. ಇವ್ನ ಮಾತು ಕೇಳ್ಕೊಂಡು, ನಾವು ಏನೇನೋ ಕೆಟ್ಟದ್ದು ಯೋಚ್ನೆ ಮಾಡ್ತಾ ಇದ್ವಿ. ಸಧ್ಯ ನೀವು ಸೇಫಾಗಿದೀರಲ್ಲ" ಅಂತ ವಿವರಿಸಿದಳು.

ನನ್ನಾಕೆ ಮಾತು ಮುಗಿಯುತ್ತಿದ್ದಂತೆ, ಶಾಮಣ್ಣ ಘೊಳ್ಳೆಂದು ನಕ್ಕು "ಸಕತ್ತಾಗಿ ಬಿದ್ರಿ ಬೇಸ್ತು. ಈ ಕೂಲಿ ಹುಡ್ಗ ಹೇಳಿದ್ದು ಕರೆಕ್ಟೇ. ಹಿಂದಿನ ರಸ್ತೇಲಿ, ಯಾರೋ. ಯಾವ್ದೋ ಫಂಕ್ಷನ್‌ಗೆ ಮನೆ ಮುಂದೆ ದೊಡ್ಡದಾಗಿ ಶಾಮಿಯಾನ ಹಾಕಿದ್ರಂತೆ, ಈ ಹುಡ್ಗ ಆ ಕಡೆಯಿಂದ್ಲೆ ನಂ ಮನೆಗೆ ಕೆಲ್ಸಕ್ಕೆ ಬರೋದು, ಅಕಸ್ಮಾತ್ತಾಗಿ ಶಾಮಿಯಾನಕ್ಕೆ ಬೆಂಕಿ ತಗ್ಲಿ ಸುಟ್ಹೋಯ್ತಂತೆ. ಈ ಗೂಸ್ಗು ಹುಡ್ಗಂಗೆ ಶಾಮಣ್ಣ, ಶಾಮಿಯಾನ ಎರಡೂ ಒಂದೇ ಇವನ್ಗೆ. ಅದಕ್ಕೆ ನೀವು ಹೇಳಿದ್ರಲ್ಲಿ ಹಾಗೇನೇ ಕೂಕೊಂಡು ನಮ್ಮನೇಗೂ ಓಡ್ಬಂದ. 'ತತ್ ನಿನ್ನ ! ಶಾಮಣ್ಣ ಅಲ್ಲೋ ಮಂಕೇ,

ಶಾ...ಮಿ...ಯಾ...ನ' ಅಂತ ಹೇಳ್ಕೊಟ್ಟೆ. ನಾನಂತೂ ಕಲ್ತ್ಗಂಡ್ಬಾಗೆ ಇದೀನಿ." ಅಂತ ನಗುತ್ತಾ ವಿವರಿಸಿದ.

ನಾನು ನನ್ನ ಇವ್ರಿಗೆ ಈಗ ಸಪೋರ್ಟ್ ಮಾಡಿ ಹೇಳ್ದೆ "ಆಫ್‌ಟ್ರಾಲ್, ನನ್ ವೈಫ್ದೂ ತಪ್ಪಿಲ್ಲ. ಯಾಕಂದ್ರೆ, ಇವ್ರಿಗೂ ಆ ಎರ್ಡು ಪದಗಳ ಅರ್ಥ ಗೊತ್ತಿರ್ಲಿಲ್ಲ, ಅಲ್ವಾ ಇವ್ಳೇ ?" ಅಂತ ಗೇಲಿ ಮಾಡ್ದೆ.

ಇವ್ಳು "ಥೂಃ ಹೋಗ್ರೀ" ಅಂತ ಮೋಹಕವಾಗಿ ನಕ್ಕು, ಹಗ್ಗ ತರಲು ಒಳ ಓಡಿದಳು. ನನಗಂತೂ ನಗು, ತಡೆಯೋಕೇ ಆಗ್ಲಿಲ್ಲ. ನಾ ನಕ್ಕಿದ್ದನ್ನು ನೋಡಿ, ಸಣ್ಣಗೆ ಅಳುತ್ತಿದ್ದ ಕೂಲಿ ಹುಡುಗನ ಮುಖ ಗೆಲುವಾಯಿತು. ಅವನೂ "ಹಿಃ ಹಿಃ" ಅಂತ ನಕ್ಕ.

ಇಷ್ಟರಲ್ಲಿ ಇವ್ಳು ಹಗ್ಗ ಹಿಡಿದು ಹೊರ ಬಂದಳು, ಆಗಲೆ "ಲಾಂಗ್ ಲೀವ್ ಶಾಮಣ್ಣ, ಲಾಂಗ್ ಲೀವ್ ಶಾಮಣ್ಣ" ಅಂತ ಬಡಪಾಯಿ ಕೂಲಿ, ಹುಡುಗನ ಬಾಯಿಂದ್ಲೇ ಹೇಳಿಸಿ, ಶಾಮಣ್ಣಂಗೆ ಆಶೀರ್ವಾದ ಮಾಡಿದೆವು.

ಹಾದಿಯಲ್ಲಿ ಕೇಳಿಸಿದ್ದು :-

"ನೀವೇನೇ ಹೇಳಿ ಶಂಕ್ರಪ್ಪ, ಎನ್. ಟಿ. ಆರ್ ಏನ್ಮೋ ಮಾಡಿ, ಔಟ್-ಲಾ ಗಳ ಜೊತೆ ಎಂದೂ ವ್ಯವಹಾರ ಇಟ್ಕೊಂಡಿರ್ಲಿಲ್ಲ.

ಯಾವ ವ್ಯವಹಾರ ಇದ್ರೂ ಎಲ್ಲಾ ಇನ್-ಲಾ ಗಳ ಜೊತೆಗೇನೇ..."

ಕವಳ-ಕಾವಲು

ನಂದಿನಿ ಕಾಪಡಿ

ನಮ್ಮೂರು ಗೋವಾದ ಬಗ್ಗೆ ನೀವೆಲ್ಲಾ ಕೇಳಿರಲೇಬೇಕು. ಕೇಳದಿದ್ದವರು ನೋಡಿರಲೇ ಬೇಕು. ನೋಡದಿದ್ದವರು ಅದರ ಬಗ್ಗೆ ಯೋಚಿಸಿ ಯೋಚಿಸಿ ಕನಸು ಕಂಡಿರಲೇಬೇಕು. ಅಪರಂಜಿ ಕೂಡಾ ಅಲ್ಲೇ ಬಂದು ಫ್ರೆಂಚ್ ಸಿನಿಮಾದಲ್ಲಿ ಪಾತ್ರ ವಹಿಸಿ ಹೋಗಿದ್ದನ್ನು ನಾನು ಮಾತ್ರ ಮರೆಯುವುದಿಲ್ಲ.

ಈಗ ನಾನು ಹೇಳುತ್ತಿರುವ ಕಥೆ ಈ ಕಾಲದ್ದಲ್ಲ. ಸುಮಾರು 1930-35 ಇಸವಿಯಲ್ಲಿ ನಡೆದದ್ದು. ನಿಜವಾಗಿಯೂ ಈ ಕಥೆ ನಡೆಯಿತೋ, ಅಥವಾ ಬರೀ ಲೋಕ ಕಥೆಯೋ ಎಂದು ಯಾರಿಗೂ ತಿಳಿಯದು. ಆದರೆ ರಸವತ್ತಾಗಿ ಹೇಳಿದ ಕಥೆಯನ್ನು ಕೇಳಿ ಆನಂದಿಸಿರುವ ನನಗೆ ನಿಮ್ಮ ಹತ್ತಿರ ಆ ವಿನೋದ ಹಂಚಿಕೊಳ್ಳದೇ ಇರಲು ಸಾಧ್ಯವೆ ?

ರಾಯಬಂದರಿನ ಪುಂಡಲೀಕ ಕಾಮತರ ಕುಟುಂಬ ತುಂಬಾ ಶ್ರೀಮಂತ ಕುಟುಂಬ. ಪೋರ್ಚುಗೀಸರ ಆಳ್ವಿಕೆಯ ಆ ಕಾಲದಲ್ಲಿ ಇವರು ತಮ್ಮ ಒಂದು ಹಡಗನ್ನು ವ್ಯಾಪಾರಕ್ಕೆ ತಂದಿದ್ದರು. ಯೂರೋಪ್, ಚೀನಾ ಮುಂತಾದುವುಗಳ ಕಡೆ ಹೋಗಿ ಬರುವ ಹಡಗಿನಲ್ಲಿ ಬೇಕಾದಷ್ಟು ಸಂಪತ್ತು ತುಂಬಿರುವುದು, ಈಗಿನ ತರಹ ಆಗ, ವೇರ್ ಹೌಸ್ ಮತ್ತು ಬ್ಯಾಂಕುಗಳೊಂದೂ ಇಲ್ಲ. ಮನೆಯೇ ಗುಡಾಣ.

ರಾಣೆ ಎನ್ನುವ ಬಂಡುಕೋರನೊಬ್ಬ ಅಲ್ಲಿ ಆಗಾಗ್ಗೆ ಹಾವಳಿಗೆ ಕಾರಣನಾಗುತ್ತಿದ್ದ. ಇದ್ದಕ್ಕಿದ್ದಂತೆ ಮನೆಗಳಿಗೆ ನುಗಿ, ಸಂಪತ್ತನ್ನೆಲ್ಲಾ ದೋಚಿಕೊಂಡು ಹೋಗುತ್ತಿದ್ದ. ಹಡಗು ಬಂದನಂತರ ಸಾಮಾನುಗಳೆಲ್ಲಾ ಪುಂಡಲಿಕ ಕಾಮತರ ಮನೆಯಲ್ಲಿಯೇ ಶೇಖರವಾಗುತ್ತಿದ್ದವಂತೆ. ಲಕ್ಷಾಂತರ ರೂಪಾಯಿ ಬೆಲೆಬಾಳುವ ಆ ಸಂಪತ್ತನ್ನು ನೋಡಿಕೊಳ್ಳಲು ಈಗಿನಂತೆ ಕಾವಲುಗಾರರಿರುತ್ತಿರಲಿಲ್ಲ. ಆದರೂ ಕಾಮತರು ತಮಗೆ ತಿಳಿದಂತೆ ಆ ಸಂಪತ್ತನ್ನು ರಾಣೆಯಿಂದ ಕಾಪಾಡುತ್ತಿದ್ದರಂತೆ

ಪಣಜಿಗೆ ಹತ್ತಿರವಾಗಿದ್ದ ಇವರ ಮನೆ ನೂರಾರು ಬಡ ವಿದ್ಯಾರ್ಥಿಗಳಿಗೆ, ಬ್ರಹ್ಮಚಾರಿಗಳಿಗೆ, ಬಂಧು ಜನಕ್ಕೆ ಆಶ್ರಯ ಕೊಡುವುದು. ರಾತ್ರಿ ಏಳುಗಂಟೆಗೆಲ್ಲಾ ಕತ್ತಲಾಗಿ ಬಿಡುವುದು. ಮನೆ ತುಂಬಾ ಜನಕ್ಕೆ ಆ ಹೊತ್ತಿಗೆ ಚಹಾ, ಜೊತೆಗೆ ಚಿವಡಾ,

ಖಾರಾ ಶೇವ, ರವೆಲಾಡುಗಳ ಉಪಹಾರ ಆಮೇಲೆ ಎಲ್ಲರದೂ ಮಾತು ಕತೆ, ಹರಟೆ. ಬೆವರಿನಿಂದ ಬೇಸತ್ತವರು ಸ್ನಾನ ಮಾಡಲು ಬಾವಿಯ ಕಡೆ ಹೊರಟರೆ ಇನ್ನು ಕೆಲವರು, ಭಜನೆ ಮಡಳಿ ನಡೆಸುವರು, ತದನಂತರ ಎಂಟೂವರೆ ಗಂಟೆಗೆ ಇದ್ದ ಒಂದೇ ರೇಡಿಯೋಸಲ್ಲಿ ಸುದ್ದಿ ಸಮಾಚಾರ, ಸಂಗೀತ ನಾಟಕ ಕೇಳುವ ಹುಚ್ಚು.

ಸರಿ ಗಂಟೆ ಹತ್ತಾಗಿಬಿಡುವುದು. ಆಗಷ್ಟೇ ಪುಂಡಲೀಕ ಕಾಮತರು ಜೋರಾಗಿ ಗಂಟೆ, ಜಾಗಟೆ ಬಾರಿಸುತ್ತಾ ದೇವರ ಪೂಜೆಗೆ ಕುಳಿತುಕೊಳ್ಳುವರು ಹತ್ತೂವರೆಗೆ ಮನೆಯಲ್ಲಿದ್ದವರಿಗೆಲ್ಲಾ ಹುರಿದ ಕಡಲೆ, ಬಾಳೆ ಹಣ್ಣಿನ ತುಂಡುಗಳ ಪ್ರಸಾದ ವಿತರಣೆ, ಎಲ್ಲರಿಗೂ ಕೇಳುವಂತೆ ಕಾಮತರು ಪತ್ನಿಯನ್ನುದ್ದೇಶಿಸಿ "ಕೇಳಿತೆ ತಡವಾಗಿ ಹೋಯ್ತು, ಊಟ ಕಾಣುವುದೋ ಹೇಗೆ" ಎನ್ನುವರು ಒಳಗಿನಿಂದ ಶ್ರೀಮತಿ ರಖುನೂ ಬಾಯಿಯವರು "ಸರಿ ಚೆನ್ನಾಗಿ ಕೇಳ್ತಿದೀರಿ ಈಗ ತಾನೇ ಕೆಲಸದವರು ದೊಡ್ಡ ಮೀನನ್ನ ತಂದಿದ್ದಾರೆ, ಸ್ವಲ್ಪ ತಾಳಿಬಿಡಿ ಬಿಸಿಬಿಸಿಯಾಗಿ ಅಡಿಗೆ ಮಾಡಿ ಬಿಡ್ತೇನೆ "ಎಂದು ಹೇಳಿ" ಸುಶೀಲೂ ಸುಶೀಲಾ ಈ ಮೀನಿನ ಆಕಾರ ನೋಡಿದೆಯಾ? ಐವತ್ತು ಜನಗಳಿಗೆ ಸರಿಯಾಗಿ ಹೋಗುತ್ತದೆ "ಎನ್ನುತ್ತಾ ಕೆಲಸದವಳನ್ನು ಕೂಗು ವರು. ಕೆಲಸದವಳು ಜೋರಾಗಿ ಕೂಗುತ್ತಾ "ಮಾಯಿ ಮಾಯಿ" ಈಗ ತಾನೇ ಇನ್ನೂ ರಕ್ಕೊ ಹೆಚ್ಚು ಸಿಗಡಿ ಮೀನುಗಳನ್ನು ಸ್ವಚ್ಛಮಾಡಿಕೈಬಿದ್ದು ಹೋಗಿದೆ. ಇನ್ನು ಈ ಮೀನೊ" ಎಂದು ಗೊಣಗಿಕೊಳ್ಳುವಳು.

ಹೊರಗೆ ಕುಳಿತವರಿಗೆ ದೊಡ್ಡ ಮೀನು, ಸಿಗಡಿ ಮೀನು ಈ ಪದಗಳು ಕಿವಿಗೆ ಬಿದ್ದದ್ದೇ ತಡ, ಹೊಟ್ಟೆಯಲ್ಲಿ ತಾಳ ಹಾಕಲು ಪ್ರಾರಂಭ. ಪುಂಡಲೀಕ ಕಾಮತರು ಬಟ್ಟೆ ಬದಲಿಸಲು ಒಳಗೆ ಹೋದಮೇಲೆ ಒಂದಷ್ಟು ಜನ ಬಾಂಗಡಾ ಮೀನಿನ ಬಗ್ಗೆ ಉಪನ್ಯಾಸ ಕೊಟ್ಟರೆ ಇನ್ನು ಕೆಲವರು ಕರ್ಲಿ ಮೀನಿನ ಮುಂದೆ ಬೇರೆ ಯಾವುದೂ ಇಲ್ಲ ಎನ್ನುವರು. ಆಗ ಒಳಗಿನಿಂದ ಕಾಮತರ ಶ್ರೀಮತಿಯರು ಕೂಗು "ಶೇವತೆ, ಶೇವತೆ ನಾಲ್ಕು ಕಾಯಿ ಸಾಕೇನೆ ? ಇನ್ನೂ ಎರಡು ಒಡೆದು ಬಿಡು"

ಒಳಗಿನಿಂದ ಕಾಯೊಡೆದ ಸದ್ದು, ನಂತರ ದೊಡ್ಡ ಈಳಿಗೆಯಲ್ಲಿ "ಪರ್ ತರ್" ಎಂದು ಕಾಯಿ ತುರಿದ ಸದ್ದು ಗಡಿಯಾರ ಮುಂದೋಡುತ್ತಲೇ ಇದೆ.

ಈಗ ಸುಶೀಲೆಯ ಧ್ವನಿ "ಮಾಯಿ ಮಾಯಿ ಇಷ್ಟು ದೊಡ್ಡ ಮೀನು ಎಲ್ಲಿ ಸಿಕ್ಕಿತು ? ಇಂತಹ ಸುರಮೈ ಮೀನನ್ನು ಜನ್ಮದಲ್ಲಿ ನೋಡಿರಲಿಲ್ಲ ಆಹಾ ಎಷ್ಟೊಂದು ತಾಜಾ ಮೀನು ಗೋತ್ತೆ, ಇನ್ನೂ ಜೀವವಿದೆ"

ಇಷ್ಟು ಹೊತ್ತಿಗೆ ಗಂಟೆ ಹನ್ನೊಂದೂವರೆ ಕೆಲವರು ಅಲ್ಲೇ ತೂಕಡಿಸಿದರೆ ಇನ್ನು ಕೆಲವರು "ಪರವಾಗಿಲ್ಲ ಕಾದಷ್ಟೂ ಮೀನಿನ ರುಚಿ ಹೆಚ್ಚುವುದು "ಎಂದು ಕೊಳ್ಳುತ್ತಾ ಅಲ್ಲೆ ಮರಾಠಿ ಪುಸ್ತಕ ಓದುತ್ತಾ ಕೂಡುವರು

ಸರಿಯಾಗಿ ಹನ್ನೆರಡು ಗಂಟೆಗೆ ಒಳಗಿನಿಂದ ಕಾಯಿ ರುಬ್ಬುವ ಗುಡು ಗುಡು ಸದ್ದು ನಿಂತು ಹೊರಗಿನವರು 'ಆಹಾ ಇನ್ನೇನು ಬಡಿಸುವದು' ಎಂದುಕೊಳ್ಳುವರು

ಪುಂಡಲೀಕ ಕಾಮತರ ಸೊಸೆ ಮಂಗಲ್ ಈಗ ಕೂಗುವಳು "ಜಾನೂ ಜಾನೂ ತೆಂಗಿನೆಣ್ಣೆ ತೆಗೆದುಕೊಡು" ಹತ್ತು ನಿಮಿಷಗಳ ನಂತರ ಬಿಸಿ ಬಿಸಿ ಕಾವಲಿಯ ಮೇಲೆ ಚುಂಯ್ ಚುಯ್ ಎಂದು ಮೀನನ್ನು ಹುರಿದ ಸಪ್ಪಳ, ಆ ಘಮ ಘಮ ವಾಸನೆಗೆ ಹೊರಗೆ ತೂಕಡಿಸಿದ್ದವರೆಲ್ಲ ಎದ್ದು ಇನ್ನೊಮ್ಮೆ ಬಾವಿಯ ಹತ್ತಿರ ಹೋಗಿ ಮುಖ ತೊಳೆದು ಬರುವರು.

ಗಂಟೆ ಹನ್ನೆರಡೂ ಮುಕ್ಕಾಲು ಪುಂಡಲೀಕ ಕಾಮತರು ಹೊರಬಂದು ಜೋರಾಗಿ "ಕೇಳ್ತೆ ಇದೇನು ಇಷ್ಟು ಕಾಯಿಸುವುದೆ ? ರಾತ್ರಿಯಾಗ್ಹೋಯ್ತು ಇನ್ನು ಅನ್ನ ಎಲೆಗೆ ಬಿದ್ದಿಲ್ಲ" ಎಂದು ಹುಸಿಕೋಪ ತೋರಿಸುವರು.

ಒಂದು ಗಂಟೆಗೆ ಹೊರಗೆ ಗುಡಿಸಿ, ಬಾಳೆ ಎಲೆ ಹಾಕುವ ಸಂಭ್ರಮ. ಬಿಸಿ ಬಿಸಿ ಅನ್ನ ಅದರ ಮೇಲೆ ಬಾಂಗಡಾ ಮೀನಿನ ಸಾರು, ನಂಜಿಕೊಳ್ಳಲು ಹುರಿದ ಸುರಮೈ ಮೀನು ಮತ್ತು ಸೀಗಡೀ ಮೀನಿನ ಮಸಾಲೆ ವ್ಯಂಜನ, ಇಷ್ಟೆಲ್ಲಾ ಮೀನಿರುವಾಗ ಯಾರೂ ಮೂಲಂಗಿ ಸೊಪ್ಪಿನ ಪಲ್ಯಕ್ಕೆ ಕೈ ಹಾಕುತ್ತಿರಲಿಲ್ಲವಂತೆ. ಎಲ್ಲರ ಜಠರಾಗ್ನಿ ಶಮನವಾಗಲು ಕೋಕಂ ಹಣ್ಣಿನ ರಸವನ್ನು ಕಾಯಿಹಾಲಿಗೆ ಸೇರಿಸಿ ಮಾಡಿದ "ಕಢಿ" ಬಡಿಸುವ ಹೊತ್ತಿಗೆ ಪೂರ್ತಿ ಎರಡು ಗಂಟೆ.

ಗಂಡಸರೆಲ್ಲಾ ಉಂಡು ಮಲಗಲು ಹೊರಟ ಮೇಲೆ ಹೆಂಗಸರ ಊಟವಾಗ ಬೇಕು. ಅನಂತರ ಆಳುಕಾಳುಗಳದ್ದು ಮನೆ ಗುಡಿಸಿ ಸ್ವಚ್ಛ ಮಾಡುವ ಹೊತ್ತಿಗೆ ಕೋಳಿ ಕೂಗಿ ಸೂರ್ಯನ ಕಿರಣ ಕಾಣಿಸಿ ಸೊಸೆ ಚಹಾ ಮಾಡಲು ಸಿದ್ಧಮಾಡುವಳು

ಉದಯರಾಗ ಹಾಡಿಕೊಳ್ಳುತ್ತಾ ಪುಂಡಲೀಕ ಕಾಮತರು ರಾಣಿ ಬರದಿರ ದಂತೆ ತಮ್ಮ ಮನೆಯ ಕಾವಲು ಎಷ್ಟು ಚೆನ್ನಾಗಿದೆ ಎಂದು ಮನಸ್ಸಿನಲ್ಲೆ ಹೇಳಿ ಕೊಳ್ಳುತ್ತಾ "ಬಾವಿಯ ಕಡೆ ನಡೆಯುತ್ತಿದ್ದರಂತೆ.

ವಿಡಂಬನೆ ಅಥವಾ ಮಕ್ಕಳಿಗಾಗಿ!

ಹೀಗೊಂದು ಮುಷ್ಕರ !

ಕೃಷ್ಣ ಸುಬ್ಬರಾವ್

"ನಮ್ಮ ಭಾಷೆ ಹಾಗು ಭಾವನೆಗಳನ್ನು ಮನುಷ್ಯರಾರು ಅರ್ಥಮಾಡಿಕೊಂಡಿಲ್ಲ ವಾದರಿಂದ ನಾವು ನಮ್ಮ ಶೋಷಣೆ ವಿರುದ್ಧ ನಾವೇ ಹೋರಾಡಬೇಕಾಗಿದೆ. ನಮ್ಮ ಜಾತಿ ಹಾಗು ವರ್ಗಗಳನ್ನು ಬದಿಗೊತ್ತಿ ಒಂದಾಗಬೇಕಾದ ಕಾಲ ಬಂದಿದೆ. ಸಸ್ಯ ಹಾರಿ ಮಾಂಸಹಾರಿ ಎಂಬ ಬೇಧವನ್ನು ಮರೆತು ಹೋರಾಡಬೇಕಾಗಿದೆ. ನಾನೊಬ್ಬ ಮೋಸಗಾರ ಎಂಬ ಪಟ್ಟವನ್ನು ಮಾನವರು ನನಗೆ ಕಟ್ಟಿ, ಯಾರೋ ಒಮ್ಮೆ ಮಾಡಿದ ಮೋಸಕ್ಕಾಗಿ ನಮ್ಮ ವಂಶವನ್ನೇ ನಾಶಮಾಡುವ ಕೆಲಸಮಾಡಿದ್ದಾರೆ. ನನ್ನ ಮೇಲೆ ಕಥೆಗಳನ್ನು ಹೆಣೆದು ತಲತಲಾಂತರದಿಂದ ಕೆಟ್ಟ ಹೆಸರು ತಂದಿದ್ದಾರೆ. ಮಾನ ವರಿಗಾದರೆ ಕೋರ್ಟಿದೆ ನಾವು ಮಾನನಷ್ಟ ಮೊಕದಮ್ಮೆ ಹೂಡಲು ಯಾವ ಕೋರ್ಟಿದೆ ? ಯಾವ ನ್ಯಾಯವಿದೆ ? ನಾನು ಮೃಗಾಲಯದ ಪ್ರಾಣಿಗಳ ಮುಂದಾ ಳತ್ವ ವಹಿಸಿರುವುದರಲ್ಲಿ ಯಾವ ದುರುದ್ದೇಶವು ಇಲ್ಲ. ನಾನು ನರಿ ಮಾತ್ರ, ಗುಳ್ಳೆ ನರಿಯಲ್ಲ. ನೀವು ನನ್ನನ್ನು ನಂಬಿ. ನಮ್ಮನ್ನೆಲ್ಲಾ ತಮ್ಮ ಮನರಂಜನೆಗಾಗಿ ಹಣದ ಸಂಪಾದನೆಗಾಗಿ 'ಮೃಗಾಲಯ'ದ ಹೆಸರಿನಲ್ಲಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಹುಲಿಯನ್ನು ಬಯಲಿನಲ್ಲಿ ಬಿಟ್ಟಿದ್ದೇವೆ ಎಂದು ಜಂಬಕೊಚ್ಚಿಕೊಳ್ಳುತ್ತಾರೆ. ಅದೂ ಕೂಡಾ ಒಂದು ಬಂಧನವೆ, ಬಹುಶಃ ಅದಕ್ಕೆ ಹುಲ್ಲಿನ ಮೇಲೆ ಹೆಜ್ಜೆ ಇಡುವ ಹಾಗು ಹೆಚ್ಚು ವ್ಯಾಪ್ತಿ ಓಡಾಡುವ ಜಾಗ ಸಿಕ್ಕಿರಬಹುದು ಆದರೆ ಬಯಲಿಗೂ ಬೋನಿಗೂ ಹೆಚ್ಚು ವ್ಯತ್ಯಾಸವೇನಿಲ್ಲ. ನಮ್ಮನ್ನು ಹೆಚ್ಚು ಶೋಷಣೆಗೆ ಒಳಪಡಿ ಸುವ ಅಧಿಕಾರದ ವಿರುದ್ಧ ಪ್ರತಿಭಟಿಸಬೇಕಾದ ಸಂದರ್ಭ ಬಂದಿದೆ. ನಮ್ಮ ರೋಷ. ಕೋಪ ಎಲ್ಲಾ ಬೋನಿನ ಗೋಡೆಗಳಿಗೆ, ಕಂಬಿಗಳಿಗೆ ಸೀಮಿತವಾದರೇನೂ ಉಪ ಯೋಗವಿಲ್ಲ. ನಾವು ಪರಿಣಾಮಕಾರಿ ಪ್ರತಿಭಟನೆಗೆ ಸಜ್ಜಾಗಬೇಕು. ನಮಗೆ ಹೆಚ್ಚಿನ ಆಹಾರ ಕೊಡದೆ ಎಷ್ಟೋ ಸಂಗಾತಿಗಳು ಅಸು ನೀಗಿವೆ. ಯಾರ ಮೇಲಿನ ಕೋಪ ವನ್ನು ನಮ್ಮ ಮೇಲೆ ತೀರಿಸಿಕೊಂಡಿದ್ದಾರೆ. ನಮ್ಮನ್ನು ಕಾಪಾಡುವ, ಬೆಳೆಸುವ ಹೊಣೆಯನ್ನು ಹೊತ್ತವರೆಲ್ಲ ನಮಗೆ ಮೋಸಮಾಡುತ್ತಿದಾರೆಂದು ಹೇಳಲಾಗುವು ದಿಲ್ಲ ಅದರಲ್ಲೂ ಕೆಲವರು ಅಸಹಾಯಕರು. ಅದನ್ನು ನಾವು ಕಣ್ಣಾರೆ ನೋಡಿದ್ದೇವೆ. ನಮ್ಮಲ್ಲಿ ಕೆಲವು ಪ್ರಾಣಿಗಳಿಗೆ ಮಾಂಸನೀಡುವಾಗ ಕಣ್ಣೀರು ಹಾಕುತ್ತಾ ಕೊಟ್ಟ ಕೆಲ್ಸ ಗಾರರನ್ನು ಕಂಡಿದ್ದೇವೆ. ಆದ್ದರಿಂದ ನಮ್ಮ ಹೋರಾಟ ವ್ಯವಸ್ಥೆ ವಿರುದ್ಧವೇ ಹೊರತು ವ್ಯಕ್ತಿಗಳ ವಿರುದ್ಧವಲ್ಲ. ಬೀದಿಯಲ್ಲಿ ಇದ್ದಿದ್ದರೆ ಬಹುಶಃ ನಮಗೆ ಆಹಾರ ಸಿಗಬಹುದಿತ್ತು. ಅಥವಾ ನಾವೆಲ್ಲ ಸಾಕು ಪ್ರಾಣಿಗಳಾಗಿದ್ದರೆ ಎಷ್ಟುಸಂಭ್ರ ಮದಿಂದ ರಾಜರಾಗಿ ಮೆರೆಯಬಹುದಿತ್ತು. ಹುಲಿ, ಸಿಂಹ ಸಾಕುವ ಎದೆಗಾ

ರಿಕೆ ಮಾನವರಲ್ಲಿ ಬರುವುದೆಂದು ? ಆನೆಗಳಿಗಾದರೂ ದೇವಾಲಯಗಳಿವೆ ನಮಗೆ ಎಂದರೆ ನಮ್ಮಂತಹವರಿಗೆ ಮೃಗಾಲಯವೇ ಗತಿ. ನಮಗೇನು ಹೊಟ್ಟೆ ಉರಿಯಿಲ್ಲ. ಸರ್ಕಸ್ ಸೇರುವ ಸೌಭಾಗ್ಯ ಎಷ್ಟು ಪ್ರಾಣಿಗಳಿಗಿವೆ ? ನಮ್ಮ ಮುಷ್ಕರ ಮೃಗಾಲ ಯದ ಪ್ರಾಣಿವರ್ಗಕ್ಕೆ ಸೀಮಿತ. ಕ್ಷಮಿಸಿ, ವಿಷಯದ ಗಂಭಿರತೆಯಿಂದಾಗಿ ನಾನು ಇಷ್ಟು ಧೀರ್ಘವಾದ ಪೂರ್ವಭಾವಿ ಮಾತುಗಳನ್ನು ಅನಿವಾರ್ಯವಾಗಿ ಆಡಬೇಕಾಯಿತು. ನಾವು ಅಹಿಂಸಾವಾದಿ. ಸತ್ಯಾಗ್ರಹ, ನಮ್ಮದೆ ಆದ ವಿಶಿಷ್ಟ ರೀತಿಯಲ್ಲಿ ಮಾಡಬೇಕಾ ಗಿದೆ. ಅತಿ ಶೀಘ್ರದಲ್ಲೇ ಪಾರಂಭವಾಗಬೇಕಾದ ಮುಷ್ಕರದಲ್ಲಿ ನೀವುಗಳು ಯಾವ ರೀತಿಯಲ್ಲಿ ಭಾಗವಹಿಸಬಲ್ಲಿರಿ ?" ಎಂದು ಹೇಳುತ್ತಾ ನರಿ ವೇದಿಕೆಯನ್ನು ಬಿಟ್ಟು ಕೊಡುತ್ತಾ ಕೆಳಕ್ಕೆ ನೆಗೆಯಿತು.

ಸಣ್ಣಪುಟ್ಟ ಪ್ರಾಣಿಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಡಲು ಹುಲಿ ಸಿಂಹ ಆನೆಗಳು ತಾವು ಕಡೆಯದಾಗಿ ಮಾತನಾಡುವುದಾಗಿ ತಿಳಿಸಿ 'ಕೊನೆಮಾತು' ನಮ್ಮದೆ ಎಂಬ ಅಹಂಕಾರದಿಂದಲ್ಲ ಎಂಬುದನ್ನು ಸ್ಪಷ್ಟಪಡಿಸಿದವು.

ಕೋತಿ ವೇದಿಕೆಗೆ ಹಾರಿ "ನಾವುಗಳು ಚೇಷ್ಟೆಗೆ ಹೆಸರಾದವು. ನಾವುಗಳು ಸೋಮಾರಿಗಳಾಗುತ್ತೇವೆ. ಕೊಂಬೆಯಿಂದ ಕೊಂಬೆಗೆ ಹಾರದೆ ಬಾಲ ಮುದುರಿ ಕೊಂಡು ಕುಳಿತು ಬಿಡುತ್ತೇವೆ. ಮಕ್ಕಳು ಆಸೆಯಿಂದ ಕೊಡುವ ಕಳ್ಳೆಕಾಯಿಯನ್ನು ನಾವು ತೆಗೆದುಕೊಳ್ಳುವುದೇ ಇಲ್ಲ. ಇದರಿಂದ ನಮಗೂ ವ್ಯಥೆಯಾಗುತ್ತೆ. ಮುಗ್ಧ ಮಕ್ಕಳನ್ನು ಆನಂದಪಡಿಸುವ ಕೆಲಸವನ್ನು ನಾವು ಮಾಡದಿರುವುದು ಕಷ್ಟವೆ. ಆದರೆ ಮನಸನ್ನು ಗಟ್ಟಿಮಾಡಿ ಕೊಳ್ಳುತ್ತೇವೆ. ಮಕ್ಕಳ ಕೈಯಲ್ಲಿ ಛೀಮಾರಿ ಹಾಕಿಸಿಕೊಳ್ಳ ಬೇಕು. ಕಲ್ಲು ಹೊಡಿಸಿಕೊಳ್ಳಬೇಕು ಆದರೂ ಹೋರಾಟದ ದೃಷ್ಟಿಯಿಂದ ಸಹಿಸಿ ಕೊಳ್ಳುತ್ತೇವೆ." ಎಂದು ವೇದಿಕೆಯನ್ನು ಗಿಣಿಗೆ ಬಿಟ್ಟುಕೊಟ್ಟಿತು.

"ಗಿಳಿಗಳು ಹೇಳಿದ ಮಾತನ್ನು ಕೇಳುವ ಪ್ರಾಣಿಗಳು ಎಂದು ಹೆಸರುವಾಸಿ ಅದಕ್ಕೆ 'ಗಿಣಿಮಾತು' ಎಂಬ ಮಾತು ಪ್ರಸಿದ್ಧ. ಈಗ ನಾವು, ಗಿಣಿಗಳು ಮಾನವರು ಹೇಳಿದ ಮಾತನ್ನು ಕೇಳದೆ ಪ್ರತಿಭಟಿಸುತ್ತೇವೆ. ಎಂದು ತೋರಿಸುತ್ತೇವೆ. ನಮ್ಮಲ್ಲಿ ಮಾತನಾಡುವ ಗಿಣಿಗಳೂ ಇವೆ ಅವು ಮೌನವ್ರತ ಆಚರಿಸುತ್ತವೆ. ಆದರೆ ಮಿಕ್ಕ ಗಿಣಿಗಳು ಯಾವ ರೀತಿ ಪ್ರತಿಭಟನೆ ಮಾಡಬಹುದೆಂದು ಹಿರಿಯ ಪ್ರಾಣಿಗಳು ತಿಳಿಸ ಬೇಕು. ಏಕೆಂದರೆ ಮೃಗಾಲಯಕ್ಕೆ ಬಂದ ಜನರು ನಮ್ಮ ಬಣ್ಣ ಹಾಗು ನಮ್ಮ ಕೊಕ್ಕನ್ನು ನೋಡಿ ಆನಂದಿಸುತ್ತಾರೆ. ನಾವು ಬಣ್ಣ ಬದಲಾಯಿಸಲು ಸಾಧ್ಯವಿಲ್ಲ (ಜನರಂತೆ !)"

ನವಿಲು ಜಂಬದ ಪ್ರಾಣಿ ಎಂದು ಹೆಸರುವಾಸಿ. ಯಾರೊಂದಿಗೋ ಬೆರೆಯದೆ ಪ್ರೌಡ್ ಪಿಕಾಕ್ (Proud Peacock) ಆಗಿ ಓಡಾಡುವ ನವಿಲು ಸಭೆಗೆ ಬಂದಿದ್ದೆ ಸಕಲ ಪ್ರಾಣಿಗಳಿಗೆ ಸಂತೋಷ "ನಾನು ಮುಷ್ಕರದಲ್ಲಿ ಯಶಸ್ವಿಯಾಗಿ ಭಾಗವಹಿಸಬಲ್ಲೆ ನಮ್ಮ ಬೇಡಿಕೆಗಳು ಈಡೇರುವವರೆಗೂ, ನಮ್ಮ ಶೋಷಣೆ ನಿಲ್ಲುವ ವರೆಗೂ ಗರಿ ಬಿಚ್ಚುವುದೇ ಇಲ್ಲ-ಮಳೆ ಬಿದ್ದರೂ ವಿಚಲಿತನಾಗುವುದಿಲ್ಲ" ಎಂದು ಭರವಸೆ ನೀಡಿದಾಗ ಚಿಂಪಾಂಜಿ ಚಪ್ಪಾಳೆ ತಟ್ಟಿತು.

ಮುಂದಿನ ಸರದಿ ಚಿಂಪಾಂಜಿ "ನಾನು ಮನುಷ್ಯರಿಗೆ ಹತ್ತಿರದವ ಎಂದು ಆಸಕ್ತಿ. ನಾನು ಅವರಂತೆ ಕಾಲಿನಲ್ಲಿ ನಡೆಯದೆ ಸಿಗರೆಟ್ ಸೇದದೆ ಪ್ರಾಣಿಗಳಂತೆ ಇದ್ದುಬಿಡುತ್ತೇನೆ. ಇದೇ ನನ್ನ ಪ್ರತಿಭಟನೆ" ಎಂದಿತು.

ನೀರಾನೆ ತಾನು ಯಾವ ಸಂದರ್ಭದಲ್ಲೂ ತನ್ನ ದೊಡ್ಡ ಬಾಯನ್ನು ತೆರೆಯುವುದಿಲ್ಲ ಎಂದು ಹೇಳಿದರೆ ಜಿಂಕೆ ತಾನು ಜಿಗಿಯುವುದಿಲ್ಲ ಸುಮ್ಮನೆ ಕತ್ತೆ ತರಹ ನಿಂತು ಬಿಡುತ್ತೇನೆ" ಎಂದಾಗ ಹೇಸರಕತ್ತೆ ಪ್ರತಿಭಟಿಸಿತು. ಒಂದು ಪ್ರಾಣಿ ಇನ್ನೊಂದು ಪ್ರಾಣಿಯನ್ನು ಅಪ್ಪಿಕೊಂಡು ಮಾನವರಂತೆ ಕಚ್ಚಾಡುವುದು ಸಲ್ಲ ಎಂದು ನರಿ ಮಧ್ಯೆ ಪ್ರವೇಶಿಸಿ ಜಿಂಕೆಯಿಂದ ಕ್ಷಮಾಪಣೆ ಕೇಳಿಸಿ ಪ್ರಾಣಿಗಳ ಒಗ್ಗಟನ್ನು ಮತ್ತೆ ಸ್ಥಾಪಿಸಿತು.

ಹುಲಿ ಸಿಂಹಗಳು ತಾವು ಘರ್ಜಿಸದೆ, ಓಡಾಡದೆ ಸೋಮಾರಿಯಾಗಿ ಮೃಗಾಲಯದ ವರ್ಕಿಂಗ್ ಅವರ್ಸ್‌ನಲ್ಲಿ ಮಲಗಿಬಿಡುವುದಾಗಿ ತಿರ್ಮಾನಮಾಡಿತು. ಇದರಿಂದಾ ಮೃಗಾಲಯಕ್ಕೆ ಜನರು ಬರದೆ ಗೇಟ್‌ಮನಿಗೆ ಧಕ್ಕೆಯಾಗುತ್ತೆ ವ್ಯವಸ್ಥಾಪಕರು ಕಣ್ಣು ತೆರೆಯಬಹುದು ಎಂದಿತು.

ಗೇಟ್‌ಮನಿಗೆ ಧಕ್ಕೆ ಆದರೆ ನಮಗೆ ಈಗ ಸಿಗುವಷ್ಟು ಆಹಾರ ಸಿಗುವುದಿಲ್ಲ. 'ಸಿಂಹಪಾಲು' ಎಂದು ನನಗೆ ಸಿಗುವ ಪಾಲೆ ಅಷ್ಟು ಕಮ್ಮಿಯಿರುವಾಗ ಇನ್ನು ಮಿಕ್ಕ ಪ್ರಾಣಿಗಳ ಸ್ಥಿತಿ ಏನೆಂದು ನಾನು ಊಹಿಸಬಲ್ಲೆ" ಎಂದು ಒಂದು ಒಂದು ಹೆಣ್ಣು ಸಿಂಹ ಹೇಳಿತು.

"ನಮ್ಮ ಮುಷ್ಕರದಿಂದ ವ್ಯವಸ್ಥಾಪಕರು ಕಣ್ಣು ತೆರೆಯದಿದ್ದರೆ ನಾವೇ ಕಣ್ಣು ಮುಚ್ಚಬೇಕು. ಈ ಬದುಕಿಗಿಂತ ಸಾವೇ ಮೇಲು, ನಾವು ನಮ್ಮ ಮರಿಗಳಿಗೆ ಹಾಲು ಕೊಡುವುದೇ ಬೇಡ ಎಂದು ಜಿರಾಫೆ" ಹೇಳಿತು.

"ಹಾಗೆ ಬೇಡ, ಇದು ಪ್ರಾಣಿವಿಯತಿ (ಹೊಸ ಪದದ ಸೃಷ್ಟಿ)ಯಲ್ಲ ಇದರ ಬದಲು ನಾವು ಸಂತಾನೊತ್ಪತ್ತಿ ಬಾಡಬಾರದು. ಮಾನವರು ನಮ್ಮ ಸಂತಾನೋತ್ಪತ್ತಿಯಲ್ಲಿ ಆಸಕ್ತರು. ಏಕೆಂದರೆ ಅವರಿಗೆ ಹಣದ ಪೊಟ್ಟೆ ಕೊಡುವುದು ನಾವು. ನಾವು ನಮ್ಮ ಮರಿಗಳಿಗೆ ಹಾಲು ಕೊಡದಿದ್ದರೆ ಬೇರೆ ಪ್ರಾಣಿಗಳ ಹಾಲನ್ನು ಕೊಟ್ಟು ಮತ್ತೊಂದು ಶೊಷಣೆಗೆ ಒಳಪಡಿಸುತ್ತಾರೆ. ಹುಲಿಗೆ ಹಸುವಿನ ಹಾಲು ಕೊಟ್ಟು ಮುಂದೆ ಹುಲಿಯ ವಂಶವನ್ನೆ ಸಾಧುಪ್ರಾಣಿಮಾಡಿ ತಮ್ಮ ವಶದಲ್ಲಿಟುಕೊಂಡು ಮಾಂಸಕ್ಕಾಗಿ ಹಣ ಸಾಂಕ್ಷನ್‌ಮಾಡಿಸಿ ಹುಲ್ಲು ತಿನ್ನಿಸಲೂ ಹೇಸುವುದಿಲ್ಲ. ನಾವುಗಳು ಹೆಚ್ಚು ಹುಷಾರಾಗಿರಬೇಕು ಆದ್ದರಿಂದ ನಮ್ಮ ಮರಿಗಳಿಗೆ ನಾವೇ ಮೊಲೆಹಾಲು ಕೊಡಬೇಕು ನಮ್ಮ ಮುಂದಿನ ಜನಾಂಗ (ಕ್ಷಮಿಸಿ, 'ಜನಾಂಗ'ಕ್ಕೆ ಸಮಾನ ಪದ ಸಿಗುವತನಕ ಆ ಪದವೆ ಉಪಯೋಗಿಸೋಣ) ಶೋಷಣೆಗೆ ಒಳಗಾಗುವ ಬದಲು Extinct ಆಗಿ ಕಲ್ಪನೆಯಲ್ಲೆ ಜೂರಾಸೀಕ್ ಪಾರ್ಕನಂತೆ ಒಂದೊಂದು ಪ್ರಾಣಿಗೆ ಒಂದೊಂದು ಸಿನಿಮಾ ತೆಗೆದು ತೃಪ್ತಿಪಡಲಿ ಮಾನವರು" ಎಂದು ಕಟುವಾಗಿ ನುಡಿಯಿತು. ಹುಲಿರಾಯ.

"ಒಂದು ಮೃಗಾಲಯುದಿಂದ ಇನ್ನೊಂದು ಮೃಗಾಲಯಕ್ಕೆ ವರ್ಗವಾದರೂ ಪ್ರಯೋಜನವಿಲ್ಲ. ಹೆಚ್ಚುಕಮ್ಮಿ ಎಲ್ಲಾದರಲ್ಲೂ ಒಂದೇ ಸ್ಥಿತಿ ಎಂದು ಜಿರಾಫೆ ಹೇಳುತ್ತಾ "ನಾವುಗಳು ನಮ್ಮ ಕತ್ತನ್ನು ಎತ್ತುವುದೇ ಇಲ್ಲ" ಎನ್ನುತ್ತಾ ಕತ್ತನ್ನು ಕೆಳಗಿಳಿಸಿತು.

ಆನೆ ಕಡೆಯಲ್ಲಿ ವೇದಿಕೆ ಹತ್ತದೆ (ವೇದಿಕೆಯ ಶಕ್ತಿಯನ್ನು ಅರಿತು) ಕೆಳಗಿನಿಂದ ಮಾತನಾಡುತ್ತಾ ತನ್ನ ಬಲವಾದ ಬೆಂಬಲ ಸೂಚಿಸಿ "ನಾನು ಯಾರಿಗೂ ಸಲಾಂ ಹೊಡೆಯುವುದಿಲ್ಲ" ಎಂದಾಗ ಎಲ್ಲಾ ಪ್ರಾಣಿಗಳಿಗೂ ಹೊಸ ಶಕ್ತಿ ಬಂದಿತು.

ಮೃಗಾಲಯಗಳು ಖಾಸಗೀಕರಣವಾದರೆ ಏನಾದರೂ ಉಪಯೋಗವೆ? ಅಥವಾ ಪ್ರಾಣಿದಯಾ ಸಂಘದವರು ದಾನಿಗಳಸಹಕಾರದೊಂದಿಗೆ ಪ್ರೈವೇಟ್‌ಜೂಗಳು ಮಾಡಿದರೆ ಹೇಗೆ? ಎಂಬ ವಿಷಯಗಳನ್ನು ಮುಂದಿನ ಸಭೆಯಲ್ಲಿ ಚರ್ಚಿಸುವುದಾಗಿ ಹೇಳಿ ಗೂಬೆ ಕೂತಿತು ತನಗೆ ತಾನೆ. ಯಾರೂ ಕೂರಿಸಲಿಲ್ಲ!

ಅಕ್ಕ ಪಕ್ಕದ ಮನೆಗಳಲ್ಲಿ ಗೃಹಶಾಂತಿ ಪ್ರಯೋಗಗಳು !

ಹಾ. ರಾ.

ಅಕ್ಕ :

ಲಾಯರ್ ಕೇಶವಯ್ಯ ಕೋರ್ಟಿನಲ್ಲಿ ಕಕ್ಷಿಗಾರರ ಕೇಸುಗಳನ್ನು ಸರಿಯಾಗಿ ನೋಡಿಕೊಳ್ಳದೇ ಹೋದರೂ ಮನೆಯಲ್ಲಿ ಹೆಂಡತಿಯನ್ನು ಮಾತ್ರ ಚನ್ನಾಗಿಯೇ ನೋಡಿಕೊಳ್ಳುತ್ತಿದ್ದ. ಆದರೆ ಕೇಶವಯ್ಯನಿಗೆ ಅವನ ಹೆಂಡತಿಯಿಂದ ಮೂದಲಿಕೆಗಳು ಮಾತ್ರ ತಪ್ಪಿರಲಿಲ್ಲ. ಯಾವುದಾದರೂ ಕಾರಣಕ್ಕೆ ಅವಳು ಅವನ ಮೂತಿ ತಿವಿಯುತ್ತಲೇ ಇದ್ದಳು. 'ಇವರದ್ದು ಬರೀ ಸಿವಿಲ್ ಕೋರ್ಟು ಪ್ರಾಕ್ಟೀಸು, ಅದೂ ಸ್ಮಾಲ್ ಕಾಸ್ ಕೇಸುಗಳು. ಇವರಿಗೇಕೆ ಕ್ರಿಮಿನಲ್ ಮೀಸೆ, ನೋಡೋಕೆ ಅವಲಕ್ಷಣ' ಅಂತ ಕೇಶವಯ್ಯನ ಹೆಂಡತಿ ಪಕ್ಕದ ಮನೆಯಾಕೆಗೆ ಹೇಳಿದ್ದಳಂತೆ ! ಕೇಶವಯ್ಯನ ಹೆಂಡತೀಗೂ ಗಂಡನ ಮೀಸೆಮೇಲೆ ಕಿಂಚಿತ್ತೂ ಅಭಿಮಾನ ಇರಲಿಲ್ಲ. ಅದನ್ನು ಅವಳು ಎಂದೂ ನಂಬಿಕೊಂಡಿರಲಿಲ್ಲ. ಆಸ್ತಿ ಸಮೇತ ಬಂದಿದ್ದವಳು, ಈ ಕಾರಣ ದಿಂದಲೋ ಏನೋ ಆಕೆ ಗಂಡನನ್ನು ಸ್ವಲ್ಪ ನಿಕೃಷ್ಟವಾಗೇ ಕಾಣುತ್ತಿದಳು. ಮೀಸೆ ಕಂಡರೆ ಆಗದು, ಒಂದು ತರಹ ಅಲರ್ಜಿ ! ಕೇಶವಯ್ಯ, ಪಾಪ- ಬಿಡೋಕೆ ಯಾವ ದುಶ್ಚಟಗಳನ್ನು ಇಟ್ಟುಕೊಂಡಿರಲಿಲ್ಲ. ಮೀಸೆ ಮಾತ್ರ ಬಿಟ್ಟಿದ್ದ. ಅದನ್ನೂ ಅವನು ಅಚ್ಚುಕಟ್ಟಾಗಿಯೇ ನಿಯಂತ್ರಿಸಿಯೂ ಇದ್ದ. ಪೋಲೀಸರು ಬಿಡುವಹಾಗೆ ರೌಡಿ ಮೀಸೆಯೂ ಅಲ್ಲ. ಪೈಲ್ವಾನರ ಕುಚ್ಚು ಮೀಸೆಯು ಹಾಗೂ ಅಲ್ಲ. ಎಲ್ಲೋ ಮೂಗಿನ ಕೆಳಗೆ ನೊಣಕೂತು ಕೊಂಡ ಹಾಗೆ ತನ್ನ ಪಾಡಿಗೆ ತಾನು ವಿರಾಜಿಸುವಂಥದು. **'ಆದರೂ-ಅವಲಕ್ಷಣ ತೆಗೆಸಿಬಿಡಿ'** ಅಂತ ಅವನ ಹೆಂಡತಿ ಪದೇ ಪದೇ ಹೇಳುತಲೇ ಇದ್ದಳು, ಕೇಶವಯ್ಯ ಮೊಂಡ. ಹೆಂಡತೀಗೆ ಹೆದರಿ ಲಾಯರು ಮೀಸೆ ಬೋಳಿಸಿ ಕೊಂಡು ಬಿಟ್ಟರು ಅಂತ ಯಾವನಾದರೂ ಕಕ್ಷಿಗಾರ ಅಪಸ್ವರ ನುಡಿದರೆ ಗತಿಯೇನು? ಅಂತ ಅವನ ಯೋಚನೆ. ನಿಜಕ್ಕೂ ಅವನ ಮೀಸೆ ಅವರ ವೈವಾಹಿಕ ಜೀವನಕ್ಕೆ ಯಾವ ತಡೆಯನ್ನೂ ಒಡ್ಡಿರಲಿಲ್ಲ. ಇಷ್ಟು ಸಣ್ಣ ಮೀಸೆ ಕ್ರೂರಿಯಲ್ಟಿಯಾದೀತೆ ? ಹೆಂಡತಿಗೆ ಮಾನಸಿಕ ಹಿಂಸೆಯನ್ನುಂಟು ಮಾಡುವಷ್ಟು ಪ್ರಭಾವಶಾಲಿಯಾದ ಚಾಳಿಯೆ ಇದು ? ಯಾವ ಕೋರ್ಟು ನಮ್ಮ ದೇಶದಲ್ಲಿ ಈ ಕಾರಣಕ್ಕಾಗಿ ಡೈವರ್ಸ್ ಕೊಟ್ಟಿಲ್ಲ. ಪರದೇಶಗಳಲ್ಲಿ ಕೊಟ್ಟಿದ್ದರೂ ಅಲ್ಲಿಯ ಪರಿಸ್ಥಿತಿಯೇ ಬೇರೆ-ಹೀಗೆಲ್ಲ ಕೇಶವಯ್ಯ ಲೆಕ್ಕಾಚಾರ ಹಾಕುತ್ತ ತನ್ನ ಕೇಸು ತುಂಬಾ ಸ್ಟ್ರಾಂಗ್ ಅಂತ ನಿರ್ಧಾರಕ್ಕೆ ಬಂದು 'ಬೇಕಾದರೆ ಕೋರ್ಟಿಗೇ ಹೋಗು ಅಂತ ಕಕ್ಷಿಗಾರರಿಗೆ ಹೇಳುವಂತೆ ಹೆಂಡ ತಿಗೂ ಹೇಳೇ ಬಿಟ್ಟ. ಕೇಶವಯ್ಯನ ಹೆಂಡತಿ ನೆರೆಮನೆಯಾಕೆ ಮುಂಡೋದರಿಗೆ

ಕಷ್ಟ ಸುಖ ಹೇಳಿ ಕೊಳ್ಳುತ್ತಾ ಸಲಹೆ ಕೇಳಿದಳಂತೆ. 'Eves ಮ್ಯಾಗ್‌ಜಿನ್' ಓದುತ್ತ ಪರಸ್ಪರ ವಿಚಾರ ವಿನಿಮಯಮಾಡಿಕೊಂಡರಂತೆ. ಯಾವುದೋ ಹೊಸ ಫ್ಯಾಷನ್ನೋ ಹೊಸ ರುಚಿಯನ್ನೊ ತಿಳಿದುಕೊಳ್ಳುತ್ತಿದ್ದಾರೆ ಅಂತ ಕೇಶವಯ್ಯ ಕಟ್ಟುಗಳನ್ನು ತೆಗೆದುಕೊಂಡು ಕೋರ್ಟಿಗೆ ಹೋದನಂತೆ ಅಲ್ಲಿಂದಾಚೆಗೆ ಕೇಶವಯ್ಯನ ಹೆಂಡತಿ ಮೀಸೆ ವಿಚಾರದಲ್ಲಿ ಪ್ರತಿಭಟನೆಯನ್ನು ವ್ಯಕ್ತಪಡಿಸಲಿಲ್ಲವಂತೆ ಇಷ್ಟು ಸಣ್ಣ ವಿಚಾರ ಗಳಿಗೆ ಕೋರ್ಟಿಗೆ ಹೋಗಬೇಕೆ ! ? ಈ ಲಾಯರುಗಳೇ ಹಾಗೆ, ಏನು ಮಾಡಬೇಕು ಅನ್ನೋದು ನನಗೆ ಗೊತ್ತು ಎಂದಳಂತೆ ಮಿನಾಕ್ಷಿ !

ಶನಿಗ್ರಹ ಉಂಗುರ ಕಳಚಿಕೊಳ್ಳುವ ಸುದ್ದಿ ಬಂದ ದಿವಸ ಕೇಶವಯ್ಯ ಕುಗ್ಗಿ ಹೋಗಿದ್ದ. ಅವನ ಮುಖದಲ್ಲಿ ಲಾಯರ್ ಜಂಬ ಇಳಿದೇ ಹೋಗಿತ್ತು. ಏನೋ ನಷ್ಟವಾಗಿರಬೇಕು ಅಂತ ನಾನೇ ಸಿನಿಮಾಕ್ಕೆ ಹೋಗೋಣ ಬಾ' ಎಂದು ಕರೆದೆ. ಅದೃಷ್ಟವಶಾತ್ ಟಿಕೆಟ್ ಸಿಗದೆ ಇದ್ದ ಕಾರಣ ಬೇವರ್ಸಿಗಳ ಹಾಗೆ ನಡುಬೀದಿಯಲ್ಲಿ ನಿಂತುಕೊಂಡೇ ದೋಸೆ ತಿಂದು ಮನೆ ಕಡೆ ಹೊರಟೆವು.

"ಏನೋ ಕೇಶವ, ನಿನ್ನ ಮುಖದಲ್ಲಿ ಸಂಕಷ್ಟಚತುರ್ಥಿ ಕಳೆಎದ್ದು ಕಾಣು ತ್ತಲ್ಲೋ, ಗಂಡು ಕಳೆಯೋ ಇಲ್ಲವಲ್ಲೋ' ಎಂದೆ. 'ಮೀಸೆಯನ್ನೆ ನೀನು ಪ್ರಸ್ತಾಪ ಮಾಡುತ್ತಿರುವುದು' ಎಂದ ಅವನು. "ಅದೇ ಪ್ರಧಾನವಲ್ಲ. ಇದ್ದರೆ ಇರಲಿ, ಆದರೆ ಅದರ ಗುರುತೂ ಇಲ್ಲ, ನಿನ್ನ ಮಾತಿನಲ್ಲಿ ಏನೋ ಗೂಡಾರ್ಥವಿರುವ ಹಾಗಿದೆ. ಬಿಡಿಸಿ ಹೇಳು" ಎಂದು ಅವನನ್ನು ಕೇಳಿದೆ. ಕೇಶವಯ್ಯ ತನ್ನ ಗೋಳನ್ನು ಹೇಳಿ ಕೊಂಡ. "ನಾನು ಅವಳಿಗೆ ತಾಳಿಭಾಗ್ಯ ಕೊಟ್ಟೆ. ಆದರೆ ಏನು ? ಮೀಸೆ ಅವಳಿಗೆ ಅವಲಕ್ಷಣವಾಗಿ ಕಾಣುತ್ತಂತೆ ! ಬಹಳ ದಿನಗಳಿಂದಲೂ ಅದರ ಮೇಲೆ ಒಂದು ಕಣ್ಣು ಇಟ್ಟೇ ಇಟ್ಟಿದ್ದಳು. 'ಅನಾಗರೀಕ, ಬಾಬಾಬುಡನ್‌ಗಿರಿಯವನು ಬೋಡೋ, ಚಂಬಲ್ ಅಂತ ನಾನಾ ಹೆಸರುಗಳನ್ನು ಬೀದಿಯ ಮಕ್ಕಳಿಗೆ ಹೇಳಿಕೊಟ್ಟು ಪ್ರೀತಿ ಯಿಂದ ಹೀಯಾಳಿಸಲು ಪ್ರೇರೇಪಿಸುತ್ತಿದ್ದಳು. ಒಂದು ದಿವಸ ಒಂದು ಮದುವೆ ರಿಸಪ್ಷನ್‌ಗೆ ಹೋಗುವ ಮುನ್ನ, ಸೆಂಟ್ ತರಹ ಘಮಘಮಿಸುವ ದ್ರಾವಕ ವಿದ್ದ ಒಂದು ಪುಟ್ಟಗಾಜಿನಶೀಸೆಯನ್ನು ನನಗೆ ಕೊಟ್ಟು ಚೆನ್ನಾಗಿ ಮುಖಕ್ಕೆ ಹಚ್ಚಿಕೊಳ್ಳಿ ಎಂದಳು. ನನಗೆ ಅವತ್ತು ನೆಗಡಿ ಇತ್ತು ಅದು ಹೋಗುತ್ತೇನೋ ಅಂತ ಚೆನ್ನಾಗಿ ಮೂಗಿನ ಕೆಳಗೆ ಸಿಂಪಡಿಸಿಕೊಂಡೆ. ಮೂರನೆ ದಿವಸ ಕನ್ನಡಿ ಮುಂದೆ ನಿಂತುಕೊಂಡಾ

ಗಲೇ ಗೊತ್ತಾಗಿದ್ದು. ಹಳೇ ಷೇವಿಂಗ್ ಬ್ರಶ್‌ಲ್ಲಿ ಕೂದಲು ಕಳಚಿಕೊಳ್ಳೊ ಹಾಗೆ ಮುಟ್ಟಿದರೆ ಸಾಕು ಬಿಟ್ಟು ಕೊಳ್ಳಲು ಪ್ರಾರಂಭವಾಯ್ತು. ಜಾತಕ ತೋರಿಸಿದೆ ಅಷ್ಟಮದಲ್ಲಿ ಶನಿಸೇರಿಕೊಂಡಿದೆ ಎಂದು ಗೊತ್ತಾಯಿತು, ಎಂದ. ಕೇಶವಯ್ಯನ ಹೆಂಡತಿ ಕಾಫಿ ತೆಗೆದು ಕೊಂಡು ಬಂದು ಟೇಬಲ್ಲಿನ ಮೇಲಿಟ್ಟು ಪ್ರಸನ್ನವದನಳಾಗಿ ನಿಂತು ಕೊಂಡಳು. ಗಂಡನ ಮೇಲೆ ಗೌರವ, ವಿಶ್ವಾಸಗಳು ಮೂಡಿದ್ದುದು ಕಂಡು ಬಂತು. ಭಯಭಕ್ತಿಯಿಂದ ವರ್ತಿಸಿದಳು. ಮೀಸೆ ಹೋದರೆ ಏನಂತೆ ? ಎಷ್ಟೋ ಜಟ್ಟಿಗಳೂ ಕಳೆದುಕೊಳ್ಳುತ್ತಾರೆ. ಹೋದ ಗೃಹಶಾಂತಿ ಸಿಗ್ತಲ್ಲ" ಅಂತ ನಾನು ಗಂಡು ಸಹಜವಾದ ಅನುಕಂಪದಿಂದ ಕೇಶವಯ್ಯನನ್ನು ಸಮಾಧಾನ ಮಾಡಿದೆ. ಧೈರ್ಯ ತೋಗೋ, ಹತಾಶನಾಗ ಬೇಡ, ಫಲಾಫಲಗಳು ನಮ್ಮ ಕೈಲಿಲ್ಲ, ನಮ್ಮ ಕರ್ತವ್ಯ ವನ್ನು ನಾವು ಮಾಡುತ್ತಾ ಹೋಗಬೇಕು. ಫಲ ಕೈಗೆ ಸಿಗೋ ತನಕ ಕೈ ಆಡಿಸುತ್ತಾ, ಇರಬೇಕು' ಅಂತ ಹೇಳಿ 'ರೇಪಿಡ್ ಹೇರ್ ಗ್ರೋಯರ್' ಎಂಬ ಗಿಡಮೂಲಿಕೆಗಳಿಂದ ತಯಾರಾದ ಕೇಶವರ್ಧಕ ತೈಲದ ಸೀಸೆಯೊಂದನ್ನು ಅವನ ಹೆಂಡತಿಗೆ ಕಾಣದ ಹಾಗೆ ಹಾಗೆ ಅವನ ಕೈಲಿಟ್ಟೆ ! 'ಅಷ್ಟಮದಲ್ಲಿ ಶನಿ ಸೇರಿಕೊಂಡಿದೆ ಎಂದನಲ್ಲ ! ಪಕ್ಕದಮನೆ ಡೋರ್ ನಂಬರ 8 ಎಂದು ಬರೆದಿತ್ತು. ಅಂದಮೇಲೆ ಶನಿಪಕ್ಕದಲ್ಲೇ ಸೇರಿಕೊಂಡಿದೆ ಎಂಬುದು ನನಗೆ ಖಚಿತವಾಯ್ತು !

ಪಕ್ಕ

ಪ್ರಚಂಡಕೇಶಿ-ಅವನ ಹೆಂಡತಿ ಮಂಡೋದರಿಬಾಯಿ ಪಕ್ಕದ ಮನೆ ದಂಪತಿ ಗಳು. ಆರಳು ಹುರಿಯೋವಾಗ ಪಟ ಪಟ ಅಂತ ಸಿಡಿಯುತ್ತಲ್ಲ ಅಂಥಮಾತು ಆಕೇದು. ಪ್ರಚಂಡಕೇಶಿಗೆ ದಿನಬೆಳಗಾದರೆ ಅಷ್ಟೋತ್ತರ, ಸಹಸ್ರನಾಮ ಸರ್ವೆ ಸಾಮಾನ್ಯ. ಮಾನಸಿಕ ಹಿಂಸೆ ಅನುಭವಿಸೋದಕ್ಕಿಂತ ಕಾಯಕವೇ ಕೈಲಾಸ ಎಂದು ಪ್ರಚಂಡಕೇಶಿ ಹೆಂಡತಿ ಹೇಳಿದ ಕೆಲಸಗಳನ್ನೆಲ್ಲ ಚಾಚೂತಪ್ಪದೆ ನಿಭಾಯಿಸಿಕೊಂಡು ಕಾಲಹಾಕುತ್ತಿದ್ದ. ಮೊದಲಿಗೆ ದಾಂಪತ್ಯ ಸರಸವಾಗೇ ಇತ್ತು. "ಎಲ್ಲಿ, ಆ ಪರಕೆ ತೊಗೊಂಡು ಮಂಚದ ಕೆಳಗೆ ಥಾಡಿಸಿ ನನ್ನ ಗಾಡ್ರೇಜ್ ಬೀಗದ ಕೈ ಅಲ್ಲಿ ಬಿದ್ದಿದೆ-ತೆಗೆಯಿರಿ, ಹಾಗೇ ನಾಲ್ಕೈದು ಜಿರಲೆಗಳನ್ನಾದರೂ ಸಾಯಿಸಿ" ಅಂತ ಮಂಡೋದರಿ ಬಾಯಿ ಹು ಕುಂ ನೀಡಿದಾಗ ಪ್ರಚಂಡಕೇಶಿ ಜಿರಲೆಗಳ ಮೇಲೆ ಮೂರು ಸಲ ಪಟ ಪಟ ಅಂತ ಬಡಿಯುವನು. ಅವನು ಮಂಚದ ಕೆಳಗೆ ತೂರಿದಾಗ ಸೊಂಟದ ಒಂದು ಸೈಡು ಸಡನ್ಆಗಿ ಸ್ಲಿಪ್ ಆಯ್ತು 'ಹಿಡುಕೊಳ್ಳು ಸೊಂಟ' ಅಂತ ಚೀರಿದ. ಮಂಡೋದರಿ ಪೊರಕೆ ತೊಗೊಂಡು ಓಡುತ್ತಿದ್ದ ಜಿರಲೆಗಳನ್ನು ಹೊಡೆಯುವುದಕ್ಕೆ ಹೋಗಿ ಗಂಡನ ಸೊಂಟಕ್ಕೆ ಮೂರು ಸಲ ಬಾರಿಸಿದಳು. ಜಿರಳೆಗಳು ಸಾಯದೆ ಹೋದರೂ ಪ್ರಚಂಡಕೇಶಿಗೆ ಆ ಏಟು ಹಾಯೆನಿಸಿತ್ತು. ಸ್ವಲ್ಪರಿಲೀಫೂ ಸಿಗ್ತು.

ಆ ಹಾಳು ಜಿರಲೆಗಳು ಗದುಕೋ ಅಷ್ಟು ಹಾರ್ಲಿಕ್ಸ್ ಪುಡಿ, ಬೋರ್ನ್‌ವಿಟಾ ನನಗೆ ಸಿಕ್ಕಿದ್ದಿದ್ದರೆ, ಇದರ ಎರಡರಷ್ಟು ಪ್ರಚಂಡವಾಗಿ ಪೊರಕೆ ಆಡಿಸುತ್ತಿದ್ದೆ. ದರಿದ್ರ ಜಿರಟದ ಕಾಫಿ ಕುಡಿದೂ ಕುಡಿದೂ ನಾಲಿಗೆ ವಿಷ ಆಗಿದೆ. ಫಿಲ್ಟರ್‌ಗೆ ಇಳಿದಷ್ಟೇ ನನ್ನ ಪುಣ್ಯ ! ನನ್ನ ಹೆಂಡತಿ ಇದನ್ನು ಮೌಂಟನ್ ಮಿಸ್ಟ್ ಕಾಫಿ ಅಂತಾಳೆ" ಎಂದು ಪ್ರಚಂಡಕೇಶಿ ತನ್ನ ಅಳಲನ್ನು ಲಾಯರ್ ಕೇಶವಯ್ಯ ಮುಂದೆ ಆಗಾಗ್ಗೆ ತೋಡಿಕೊಳ್ಳುತ್ತಲೇ ಇದ್ದ. ಕೇಶವಯ್ಯನ ಸಹಾನುಭೂತಿ ಅವನ ಮೇಲಿತ್ತು.

ಒಂದು ಕಾಮನ ಹಬ್ಬದ ಸಂಜೆ ಪ್ರಚಂಡಕೇಶಿಗೆ ಸ್ವಾಭಿಮಾನ ಕೆರಳಿತು-ಅವನ ಹೆಂಡತಿ ಇಸ್ತ್ರಿ ಮಾಡಿ ಅಂತ ಎರಡು ನೈಲಾನ್ ಸೀರೆಗಳನ್ನು ಅವನ ಕಡೆ ಎಸೆದಾಗ ! ವಿಧಿ ಕೆಲಸ ಮಾಡುತ್ತಲೇ ಇತ್ತು. D. V. G ಹೇಳಿರುವ ಹಾಗೆ ವಿಧಿ ಬೆಪ್ಪನಲ್ಲ. ಹರವಿದ ಸೀರೆ ಮೇಲೆ ಇಸ್ತ್ರಿ ಪೆಟ್ಟಿಗೆ ಇತ್ತು. ಆ ಹೊತ್ತಿಗೆ ಸರಿಯಾಗಿ ರಾಮಗೊಂಡಂ ವಿದ್ಯುತ್ ಜಾಲದಲ್ಲಿ ಲೋಡ್ ಷೆಡ್ಡಿಂಗ್ ಆಗಬೇಕೆ ? ಕರೆಂಟ್ ಯಾವಾಗಬಂತೋ ನೋಡ್ಕೊಳ್ಳಿಲ್ಲ ! ಆಂಧ್ರದ ವಿದ್ಯುತ್ತು. ಹೈವೋಲ್ಟೇಜು ! ಕೊಡ್ತು ಕೈ ಪರಿಣಾಮ-ಮಾಯೆ, ವಿಧಿ ಹಣೆ ಬರಹ ಇತ್ಯಾದಿ ! ನೋಡೋಕೆ ನವಿಲುಗರಿ ಹಾಗೆ ಆಗಿತ್ತು ಸೀರೆ-ಸಾವಿರ ಕಿಡಿ ಕಣ್ಣುಗಳು ! ಬೀದಿ ಅಗಸ ಹಾಗೆ ಮಾಡ್ತಾನೆ ಅಂದ್ರೆ ಮನೆ ಅಗಸನೂ ಹಾಗೇ ಮಾಡಿದ್ರೆ ಮನೆಯಜಮಾನ್ತಿ ಬಿಟ್ಟಾಳೆಯೆ ? 'ಪಕ್ಕದ ಮನೆ ಯಲ್ಲಿ ಕಾಮನ ಹಬ್ಬದ ಸಿದ್ಧತೆಗಳು ನಡೆಯುತ್ತಿವೆ. ಸ್ವಲ್ಪ ವಿಚಾರಿಸ ಬಾರದೆ' ಎಂದಳು ನನ್ನ ಮನೆಯಾಕೆ ಅಷ್ಟು ಹೊತ್ತಿಗೆ ಕೇಶವಯ್ಯ ಬಂದಿದ್ದ "ಏನೋ ಕೇಶಿ, ಬೇರೆ ಅವಕಾಶವಿರಲಿಲ್ಲವೆ ನಿನಗೆ ಕಾಮದಹನಕ್ಕೆ. Open Heart Surgery, ಮಾಡಿದ್ದಿಯಲ್ಲ" ಎಂದು ಕೇಳಿದೆ ಎಲ್ಲ 'ವಿಧಿ' ಎಂದು ತಲೆ ಮೇಲೆ ಕೈ ಇಟ್ಟುಕೊಂಡ 'All vacume, No Heart' ಎಂದ ! ಜಿರಲೆಕಾಟ ಹೇಗಿದೆ' ಎಂದು ಕೇಶವಯ್ಯ ಕೇಳಿದ. "ಹೋ, ನಿನ್ನ ಹೆಂಡತಿ ಸಲಹೆ ಕೊಟ್ಟ ಹಾಗೇನೇ ಲಕ್ಷ್ಮಣ ರೇಖೆ ತುದು ಮನೆಯಲ್ಲೆಲ್ಲ ರೇಖೆ ಎಳಿದಿದೇವೆ. ಜಿರಲೆಗಳು ಅಲ್ಲಲ್ಲೆ ಸಾಯ್ತಾ ಇವೆ" ಎಂದು ಹೇಳಿದ. "ನಾಲ್ಕು ಲಕ್ಷ್ಮಣರೇಖೆ ಪ್ಯಾಕೆಟ್ ಕೊಂಡರೆ ಒಂದು ಸೆಂಟ್ ಸೀಸೆ ಉಚಿತ ಅಂತ ಬೋರ್ಡ್ ಹಾಕಿತ್ತು ಅಂಗಡೀಲಿ. ನಾನೇ ಮೊನ್ನೆ ಹೋಗಿತಂದೆ. ಸೆಂಟ್ ಸೀಸೆಯನ್ನು ಅವಳ ಕೈಲಿಕೊಟ್ಟೆ" ಎಂದು ಅವನು ಹೇಳಿದಾಗ ಕೇಶವಯ್ಯನಿಗೆ ಷಾಕ್ ಹೊಡದ ಹಾಗೇ ಆಯ್ತು. ಮನೆ ತುಂಬ ಹಾವು ಏಣಿ ಚಿತ್ರವಿನ್ಯಾಸ ! ಜಾಮಿ ಟ್ರಿಯೋ, ಮಿಲಿಟರಿಯೋ ಅದು, ಕೇಶವಯ್ಯನಿಗೆ ಅರ್ಥವಾಗಲಿಲ್ಲ. ಹಾವು ಏಣಿ ಅವನ ತಲೆಯನ್ನು ಆಕ್ರಮಿಸಿತು ! ತಕ್ಷಣ ಕೇಶವಯ್ಯ ಮನೆಗೆ ಓಡಿದ. ಜೇಬಿನಲ್ಲಿ ಟ್ಟಿದ್ದ ಖಾಲಿ ಸೆಂಟ್ ಸೀಸೆಯನ್ನು ತೆಗೆದುಕೊಂಡು ಬಂದು ಕೋರ್ಟಿನಲ್ಲಿ ಪಾಟೀ

ಸವಾಲು ಮಾಡುವಂತೆ ಇದೇ ತಾನೇ ಪ್ರಕ್ಕಟೆ ಕೊಟ್ಟ ಸೆಂಟ್ ಸೀಸೆ" ಎಂದು ಪ್ರಚಂಡ ಕೇಶಿಯನ್ನು ಕೇಳಿದ. ಪ್ರಚಂಡಕೇಶಿ 'ಹೌದು' ಎಂದು ಹೇಳಿದ ತಕ್ಷಣ 'ನಾನು ಇದನ್ನೇ ಮೊನ್ನೆ ಮುಖಕ್ಕೆ ಸವರಿಕೊಂಡಿದು' ಎಂದ ಕೇಶವಯ್ಯ ಪ್ರಚಂಡಕೇಶಿಗೆ ಪತ್ತೆದಾರ ಪುರುಷೋತಮನಿಗಾದಷ್ಟು ಸಂತೋಷವಾಯಿತು. ಘಂಗನೆ ಎರಡಡಿ ಮೇಲಕ್ಕೆ ಹಾರಿ VSLP ಯಂತೆ ಉರಿದೇ ಹೋದ ! ಅವನ ಮುಖ ಅರಳಿತು. ''Now I CAN ERADICATE'' ಎಂದ. What ? POVERTY, ?........ CORRUPTION ? DEFECTION, ? INDISCIPLINE ? DEFECEIT? ಎಂದು ಕೇಳಿದೆ ''they are Minor things'' ಎಂದ. 'ಹಾಗಾದರೆ, ನೀನು ಏನನ್ನು ತೊಡದು ಹಾಕುವೆ ? ಬೇಗೆ ಹೇಳು" ಎಂದೆ. Now I Can Control Volcanic explosions in Human throat' ಎಂದ. 'ಅದೇನು ಸರಳವಾಗಿ ಬಿಡಿಸಿ ಹೇಳು' ಎಂದೆ. I can lock the mouth ಎಂದ ! you Mean. 'ಬಾಯಿ' ಎಂದೆ ! 'EXACTLY' ಎಂದ ಅವನು. ಅಂದೇ ಖಗೋಳ ವಿಜ್ಞಾನಿ ಗಳ ಲೆಕ್ಕಾಚಾರದಂತೆ ಧೂಮಕೇತು ಗುರುಗ್ರಹಕ್ಕೆ ಅಪ್ಪಳಿಸಿದ್ದು ಕರ್ಣಾಟಕದ ಕಡ ಲಂಚಿನಲ್ಲಿ ಕೆಟ್ಟ ಬಿರುಗಾಳಿ. ಡಿಪ್ರೆಷ್ ಮಂಡೋದರಿಬಾಯಿ ಲಕ್ಷ್ಮಣರೇಖೆಯಿಂದ ರಕ್ಷಿಸಲ್ಪಟ ಮಂಚದ ಮೇಲೆ ಹಾಯಾಗಿ ಮಲಗಿದ್ದಳು-ಟ್ರಾನ್ಸಿಸ್ಟರ್‌ನಲ್ಲಿ ಬರುತ್ತಿದ್ದ ಚಿತ್ರಗೀತೆಯನ್ನು ಕೇಳುತ್ತಾ ! ಪ್ರಚಂಡಕೇಶಿ ಖಾಲಿ ಸೆಂಟ್ ಶೀಸೆಯ ಬಿರಟೆ ತೆಗೆದು ಅದನ್ನು ಕಿರುಬೆರಳಿಗೆ ಸಿಕ್ಕಿಸಿಕೊಂಡು ಹೆಂಡತಿ ಮುಂದೆ ಗಡಿಯಾರದ ಪೆಂಡುಲಂ ಅಂತೆ ಹಿಂದಕ್ಕೂ ಮುಂದಕ್ಕೂ ಆಡಿಸಲು ಪ್ರಾರಂಭಿಸಿದ. ಮಂಡೋದರಿಬಾಯಿಗೆ ಝಂಗಾಬಲ ಉಡಿಗಿ ಹೋಯ್ತು. ತಾನು ಮೀನಾಕ್ಷಿಗೆ ಕೊಟ್ಟ ಸೆಂಟ್‌ಸೀಸೆ ಅದೆ ಎಂದು ತಿಳಿದ ಮೇಲೆ ಅವಳಬಾಯಿಂದ ಮಾತೇ ಹೋರಡಲಿಲ್ಲ. ಅಷ್ಟು ಹೊತ್ತಿಗೆ ಕೇಶವಯ್ಯ ಲಾಯರಡ್ರೆಸ್ ಹಾಕಿಕೊಂಡು ಕಟ್ಟುಗಳನ್ನು ಹಿಡಿದುಕೊಂಡು ಮಹಡಿ ಮೆಟ್ಟಲುಗಳಿಂದ ಇಳಿದು ಬರುತ್ತಿದುದನ್ನು ನೋಡಿ ಮಂಡೋದರಿಬಾಯಿ ಕಿಟಾರನೆ ಕಿರಿಚಿಕೊಂಡಳು. ಅದೇನಾಯ್ತೋ ಆಕ್ಷಣದಲ್ಲಿ, ಯಾವ ಕೆಟ್ಟನರ ಹೊರಳಿ ಸರಿ ಹೋಯ್ತೋ, ಅವತ್ತಿನಿಂದ ಮಾತು ಮೃದು ಮಧುರವಾಗುತ್ತ ಬಂತು. ದೈನ್ಯತೆ ಮೂಡಿ ಬಂದಿತ್ತು. "ದಮ್ಮಯ್ಯ, ಇದನ್ನು ನಾನು ಮೀನಾಕ್ಷಿಗೆ ಕೊಟ್ಟ ಸಂಗತಿ ಯನ್ನು ಲಾಯರ್‌ಗೆ ಬೇಳಬೇಡಿ" ಅಂತ ಗಂಡನನ್ನು ಅಂಗಲಾಚಿ ಕೇಳಿಕೊಂಡಳು. ಪ್ರಚಂಡಕೇಶಿ ಸೆಂಟ್‌ಸಿಂಟ್ ಸೀಸೆಯನ್ನು ಜೇಬಿನಲ್ಲೇ ಇಟ್ಟುಕೊಂಡಿರುತ್ತಾನೆ. ಮಂಡೋದರಿ ನಾಲಿಗೆ ಮೊಟಕಾಗಿದೆ. ತಾವರೆ ಕಮಲದ ಹಾಗೆ ಮುದಡಿಕೊಂಡಿದೆ. ಮನೆಯಲ್ಲಿ ಗೃಹ ಶಾಂತಿ ಮೂಡಿದೆ.

ಬೀಜಂಗಳೆ ಧರೆಯಂ ನುಂಗೆ.........
ಹೆಂಡರ್ ಗಂಡರನತ್ಯುಗ್ರದಿ ಶಿಕ್ಷಿಸಲ್.........
ನೆರೆಕೊಲ್ಲಲ್......ಹೊರೆ ಕಾವದೆ ?.........

ಬಯಸಿದ ಬದಲಾವಣೆ

ಕಂಭಂ ಕೃಷ್ಣಮೂರ್ತಿ

ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಪಾಟೀಲನಿಗೆ ಸಮಾಧಾನವೆನ್ನುದೇ ಇರಲಿಲ್ಲ. ಅವನು ಬಯಸಿದ್ದು ಲಭಿಸಿದ್ದರೂ ಆವನಿಗೆ ಸಂತೋಷವೇಯಿಲ್ಲ. ಸೀಗೆಬೈಲಿನ ಔಟ್ ಪೋಸ್ಟ್ ಆರಕ್ಷಕಠಾಣೆಗೆ ಅವನ ಪೋಸ್ಟಿಂಗ್ ಆದಾಗ ಹರತರದೂದು ಮಾಡಿ ಎಣ್ಣೆ ಕೊಪ್ಪಕ್ಕೆ ವರ್ಗಮಾಡಿಸಿಕೊಂಡಿದ್ದ. ಎಣ್ಣೆ ಕೊಪ್ಪಕ್ಕೆ ಬಂದಾಗಲೂ ಸುಮ್ಮನಿರದೆ, ಆವರಿವರ ಕಾಲುಕಟ್ಟಿ, ಶಾಖಾಯ ಲವಣಾಯುಗಳನ್ನು ಸಲ್ಲಿಸಿ ಮುಳ್ಳೂರಿಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡಿದ್ದ. ಇರುವುದು ಬೇಡ, ಇಲ್ಲದೆಯಿರುವುದೇ ಬೇಕಂಬೋ ಜಾಯಮಾನ ಅವನದು.

ಪಾಟೀಲ ಮುಳ್ಳೂರಿನ ಠಾಣೆಗೆ ವರ್ಗವಾಗಿ ಬಂದಾಗ ಇವನ ಮೇಲಧಿಕಾರಿಯಾಗಿದ್ದವರು ರಾಘವಚಾರ್ಯರು. ಅವರ ಹೆಸರು ಕೇಳಿಯೋ ಪಾರ್ಟಿಲಿ ಬಲು ಕಸಿವಿಸಿ ಪಟ್ಟಿದ್ದ. ಅವನ ದೃಷ್ಟಿಯಲ್ಲಿ ಆ ಹೆಸರೇ ಪೋಲೀಸ್ ಇಲಾಖೆಗೆ ಅಷ್ಟು ಸಮಂಜಸವಾಗಿದ್ದಂತೆ, ಕಂಡು ಬಂದಿರಲಿಲ್ಲ. ಸಬ್ ಇನ್ಸ್‌ಪೆಕ್ಟರಾಗಿದ್ದ ರಾಘವಾಚಾರ್ಯರು, ಆಚಾರವಂತರು. ಪೂಜೆ ಪುನಸ್ಕಾರವಿಲ್ಲದೆ ಅವರು ಒಂದು ತೊಟ್ಟು ಕಾಫಿಯನ್ನೂ ಬಾಯಿಗೆ ಹಾಕಿದವರಲ್ಲ. ಮನೆಯಿಂದ ಹೊರಬಿದ್ದ ಮೇಲೆ, ಅವರು ಹೊರಗಡೆ ಒಂದು ಗುಟುಕು ನೀರನ್ನೂ ಕುಡಿಯುತ್ತಿರಲಿಲ್ಲ. ಹತ್ತಾರು ಬಾರಿ ಕಾಫಿ ಚಾ, ಕುಡಿದು ಆಗಾಗ್ಗೆ ಬೀಡಿ ಹಚ್ಚುತ್ತಿದ್ದ ಎ. ಎಸ್ ಐ. ಪಾಟೀಲನಿಗೆ ಸಾಹೇಬರ ವಿಪರೀತ ಮಡಿವಂತಿಕೆಯಿಂದ ತುಂಬಾ ಮುಜಗರವಾಗಿತ್ತು.

ಆಚಾರ್ಯರು ಅಚ್ಚುಕಟ್ಟಾಗಿ ಮೂರು ನಾಮಗಳನ್ನು ಹಣೆಗಿಟ್ಟುಕೊಂಡು ಕಾಖಿಡಿರಿಸಿನಲ್ಲಿ ಠಾಣೆಗೆ ಬಂದಾಗ ಪಾಟೀಲನಿಗೆ ದೊಡ್ಡ ಆಘಾತವೇ ಆಗಿತ್ತು. ಮೂಗಿನ ಕೆಳಗೆ ನೊಣದಷ್ಟು ಮೀಸೆಯೂ ಎಸ್. ಐ. ಸಾಹೇಬರಿಗಿರಲಿಲ್ಲ. ದರ್ಪ ಜೂರತ್ತಂತೂ ಸುತರಾಂ ಇರಲಿಲ್ಲ. ಹಸನ್ಮುಖಿ ತಾಳ್ಮೆ ಸಮಾಧಾನದಿಂದಿರುತ್ತಿದ್ದ ರಾಘವಾಚಾರ್ಯರನ್ನು ಕಂಡು, ಪಾಟೀಲ ಮುಖ ಕಿವುಚುತ್ತಿದ್ದ "ಠಾಣೆಗೆ ಮುಖ್ಯಾಧಿಕಾರಿಯಾಗಿದ್ದ ಇಸಂ. ಹೀಗೆ ಸಾಧು ಪ್ರಾಣಿಯಂತಿದ್ದರೆ ಪೋಲಿಸ್ ಕೆಲಸವನ್ನು ನಿಭಾಯಿಸಲು ಸಾಧ್ಯವೇ ? ಪಳಗಿದ ಕೇಡಿಗಳನ್ನು ಬಡಿದುಬಾಯಿ ಬಿಡಿಸದಿದ್ದರೆ, ಕೇಸುಗಳನ್ನು ಪತ್ತೆಮಾಡುವುದಾದರೂ ಹೇಗೇ ?" ಎಂಬುದೇ ಎ. ಎಸ್. ಐ. ಗೆ

ಬಗೆಹರಿಸಲಾರದ ಸಮಸ್ಯೆಯಾಗಿತ್ತು. ಇದಕ್ಕೆ ಸರಿಯಾಗಿ ಸಾಹೇಬರೂ ಸಹ ಸಾರ್ವಜನಿಕರ ಅಹವಾಲನ್ನು ತಾಳ್ಮೆಯಿಂದ ಕೇಳುತ್ತಿದ್ದರು. ಎಷ್ಟೇ ಪೆಟ್ಟಿ ಕೇಸಾದರೂ ತನಿಕೆಗೆ ಶ್ರಮ ತೆಗೆದುಕೊಳ್ಳುತ್ತಿದ್ದರು ಎಲ್ಲರೊಂದಿಗೂ ಸಲಿಗೆಯಿಂದ ಮಾತನಾಡುತ್ತಿದ್ದರು. ತಾವು ಕುಡಿಯುದಿದ್ದರೂ ಬಂದವರಿಗೆ ತಮ್ಮ ಖರ್ಚಿನಲ್ಲೇ ಚಹದ ಆತಿಥ್ಯ ಮಾಡುತ್ತಿದ್ದರು.

ಸಾರ್ವಜನಿಕರೂ ಸಹ ಠಾಣೆಗೆ ಯಾವ ಭಯ, ಅಳಕೂ ಇಲ್ಲದೆ ಸರಾಗವಾಗಿ ಬರುತ್ತಿದ್ದರು. ಕಂಪ್ಲೇಂಟು ಕೊಡುವ ಮಂದಿ, ಮಾಮೂಲಾಗಿ ಮೊದಲು ಸೆಂಟ್ರಿಯನ್ನು ಕಂಡು, ಆತನ ಮುಖಾಂತರ ಪಿ. ಸಿ. ಯನ್ನು ಸಂಪರ್ಕಿಸಿ, ನಂತರ ಎ. ಎಸ್. ಐ. ರವರ ಕಾಲಿಗೆ ಬಿದ್ದು ಅವರ ಪರ್ಮಿಷನ್ ಪಡೆದು ಎಸ್. ಐ. ಸಾಹೇಬರನ್ನ ರಿವಾಜುಗಳಿಲ್ಲದೆ ಎಲ್ಲರನ್ನೂ ದಾಟಿಕೊಂಡು ನೇರವಾಗಿ ಸಬ್‌ಇನ್‌ಪೆಕ್ಟರ್ ಕೊಠಡಿಗೆ ನುಗ್ಗುತ್ತಿದ್ದರು. ಸಾರ್ವಜನಿಕರ ಈ ನಡವಳಿಕೆಯಿಂದ ಪಾಟೀಲನ ಕಣ್ಣು ಕೆಂಪಾಗುತ್ತಿತ್ತು. ಆಚಾರ್ಯರು ಯಾರನ್ನೂ ಬಡಿಯುತ್ತಿರಲಿಲ್ಲ. ಬಡಿಯುವುದಿರಲಿ, ಪೋಲಿಸ್ ಭಾಷೆಯನ್ನು ಬಳಸಿ ಬೈಯುತ್ತಲೂ ಇರಲಿಲ್ಲ. ಪಾಟೀಲನೆ ತಡೆಯುದೆ, ಒಂದೆರಡು ಬಾರಿ ಆರೋಪಿಗಳ ಕೆನ್ನೆಗೆ ಬಿಗಿದಾಗ, "ಪಾಟೀಲರೇ ಹಾಗೆಲ್ಲಾ ಹೊಡೀಬ್ಯಾಡಪ್ಪ, ಕಾನೂನಿಗೆ ವಿರೋಧವಾಗುತ್ತೆ" ಎಂದು ಹೊಡೆಯುತ್ತಿದ್ದ ಅವನ ಕೈಯನ್ನು ತಡೆಯುತ್ತಿದ್ದರು.

ರಾಘವಾಚಾರ್ಯರ ಕಾನೂನಿನ ವಿಪರಿತ ಪ್ರಜ್ಞೆಯನ್ನು ಪಾಟೀಲನಿಗೆ ಜೀರ್ಣಿಸಿಕೊಳ್ಳಲಾಗಲಿಲ್ಲ. ಸಾಧಾರಣವಾಗಿ ಎಸ್. ಐ. ಗಳು, ಉರುಟುಗೋಲು, ಏರೋಪ್ಲೇನ್ ಟ್ರೀಟ್‌ಮೆಂಟುಗಳನ್ನು ಕೊಟ್ಟು ಆರೋಪಿಗಳ ಬಾಯನ್ನು ಬಿಡಿಸುತ್ತಿದ್ದರೆ, ಈತ ಬೈಯುಲು ಬಿಡುವುದಿಲ್ಲವಲ್ಲಾ" ಎಂದು ಪಾಟೀಲ ದುಸುಮುಸು ಮಾಡುತ್ತಿದ್ದ. ತಮ್ಮ ಸಾಹೇಬರು, ಯಾವುದಾದರೂ ಮಠಕ್ಕೆ ಸ್ವಾಮಿಯಾಗಿಲು ಲಾಯಖ್ಖಾದ ಆಸಾಮಿ, ಅಪ್ಪಿ ತಪ್ಪಿ ಈ ಖಾತೆಗೆ ಬಂದಿದ್ದಾರೆಂದು ಅವನು ಮರಗುತ್ತಿದ್ದ." ರಾಘವಾಚಾರ್ಯರಿಗೆ ಬೇಗ ವರ್ಗವಾಗಿ, ಅವರ ಬದಲು ಬೇರೆ ಖಡಕ್ ಎಸ್. ಐ. ಬಂದು, ಠಾಣೆಗೆ ಮೊದಲಿನ ಜಬ್ರು, ಜೂರತ್ತನ್ನು ತಂದುಕೊಡಲಿ" ಎಂದು ಪಾಟೀಲ ಬದಲಾವಣೆಯನ್ನು ಬಯುಸುತ್ತಿದ್ದ.

ಪೋಲೀಸು ಇಲಾಖೆಯುಲ್ಲಿ ವರ್ಗಾವರ್ಗಿಗಳು ದಿಢೀರಾಗಿ ಸಂಭವಿಸಿ, ಎಷ್ಟೋ ಬಾರಿ ಆ ಖಾತೆಯುಲ್ಲಿರುವವರಿಗೆ ಅಚ್ಚರಿಯನ್ನುಂಟು ಮಾಡುತ್ತಿತ್ತು ಸಾಹೇಬರುಗಳ

ವರ್ಗಾವಣೆಗಳು ಅರ್ಜೆಂಟಿನಲ್ಲೇ ಆಗಿ ಹೋಗುತ್ತಿತ್ತು. ರಾಘವಾಚಾರ್ಯರು ಮುಳ್ಳೂರಿನಲ್ಲಿ ತಮ್ಮ ಬಿಡಾರಹೂಡಿ, ಸುಧಾರಿಸಿಕೆವುಳ್ಳುವಷ್ಟರಲ್ಲೇ ಅವರಿಗೆ ಎತ್ತಂಗಡಿ ಆಗಿ ಹೋಗಿತು. ಅವರ ಬದಲಿಗೆ ರುದ್ರಮುನಿಯನ್ನು ಎಸ್. ಐ. ಆಗಿ ಮುಳ್ಳೂರಿನ ಠಾಣೆಗೆ ಪೋಸ್ಟ್ ಮಾಡಿದರು. ಮೊದಲದಿನ ರುದ್ರಮುನಿಯನ್ನು ನೋಡಿದ ಪಾಟೀಲ ಬಲು ಖುಷಿ ಪಟ್ಟಿದ್ದ. ಮಜಬೂತಾದ ಮೈಕಟ್ಟು. ಮೂಗಿನ ಕೆಳಗೆ ಹರಡಿದ್ದ ಹರವಾದ ಕಲ್ಲಿ ಮೀಸೆ, ಕೆಂಪಗಿನ ಕಣ್ಣುಗಳು, ಮಾತೀಯ ಚಿನ್ಹೆಗಳೇ ಇಲ್ಲದ ಬೋಳುಹಣೆ. ನಡೆಯುವ ಗತ್ತು ನಿಲ್ಲುವ ಠೀವಿ ಬಳಸಿದ ಪೋಲೀಸ್ ಭಾಷೆ ಮುಂತಾದ ರುದ್ರಮುನಿಯ ಒಂದೊಂದು ಅಂಶವೂ ಪಾಟೀಲನನ್ನು ಸೆರೆಹಿಡಿದಿತ್ತು. "ಸಾಯೇಬ್ರು ಅಂದ್ರೆ ಇಂಗಿರಬೇಕು ನೋಡಪ್ಪಾ" ಎಂದು ತನ್ನ ಕೈಕೆಳಗಿನ ಪಿ. ಸಿ.ಗಳ ಹೇಳಿಕೊಂಡು ಅವನು ಸಂತಸಪಟ್ಟ.

ರುದ್ರಮುನಿ ಛಾರ್ಜು ತೆಗೆದುಕೊಂಡಮೇಲೆ ಠಾಣೆಯ ಕಳೆಯೇ ಬದಲಾಯಿಸಿ ಹೋಯಿತು. ಆರೋಪಿಗಳನ್ನು ಹಿಡಿದು ತಂದಾಗ ಮೊದಲು ಕಪಾಳ ಮೋಕ್ಷದಿಂದ ಪ್ರಾರಂಭಿಸಿ, ನಂತರ ಬೆಲ್ಟುಕಳಚಿಕೊಂಡು ಹಿಗ್ಗಾ ಮುಗ್ಗಾ ಬಾರಿಸಿ, ಬೂಡ್ಸಿನಿಂದ ಒದ್ದು ಹುಣ್ಣುಗಾಯಿ ನೀರ್ಗಾಯಿ ಮಾಡಿ ನಂತರವೇ ಪ್ರಶ್ನೆಗಳನ್ನು ಹಾಕುತ್ತಿದ್ದ ರುದ್ರಮುನಿ, ಆರೋಪಿ. ಅಪರಾಧಿಯೋ ಅಲ್ಲವೇ ಎಂಬುದನ್ನು ಶೈತ್ಯೋಪಚಾರ ಸಾಕಷ್ಟು ಮಾಡಿದ ಮೇಲೆಯೇ ತೀರ್ಮಾನಿಸುತ್ತಿದುದ್ದು ರುದ್ರಮುನಿಯ ಪದ್ಧತಿ ಯಾಗಿತ್ತು. ಅವನ ಆರ್ಭಟಕ್ಕೆ ಕಂಪ್ಲೇಟು ಕೊಡುಲು ಬರುವ ಮಂದಿಯೂ ಹೆದರು ತ್ತಿದ್ದರು. "ಸಾಯೇಬ್ರು ಗರಂ ಆಗಿವ್ರೆ, ಕಂಪ್ಲಿಂಟು ಗಿಂಪ್ಲೀಂಟೂಂತ ತರ್ಲೆಮಾಡ್ಕೊ ಬ್ಯಾಡಿ. ಸುಮ್ಕೆ ಒಂಟೋಗಿ" ಎಂದು ಬಾಗಿಲಲ್ಲಿರುತ್ತಿದ್ದ ಸೆಂಟ್ರಿಯೇ ಅರ್ಜಿ ಕೊಡಲು ಬಂದವರನ್ನು ಅಟ್ಟಿ ಬಿಡುತ್ತಿದ್ದ. ಅಪರಾಧಗಳೂ ನಡೆಯುತ್ತಿದ್ದರೂ, ಕಂಪ್ಲೇಂಟು ಕೊಡುವ ಮಂದಿಯೇ ಇರುತ್ತಿರಲಿಲ್ಲವಾದ್ದರಿಂದ ಎಸ್. ಐ. ರುದ್ರಮು ನಿಗೆ ಠಾಣೆಯಲ್ಲಿ ಕೆಲಸವೇಯಿಲ್ಲದೆ, ಪೋಲೀಸ್ ಡೈರಿಯಲ್ಲಿ ಸುಳ್ಳು ಪಳ್ಳು ಬರೆದು ಕೂಡುತ್ತಿದ್ದ.

ಪಿ. ಸಿ, ಗಳಿಗಂತೂ ರುದ್ರಮುನಿಯ ಮನೆಯ ಚಾಕರಿಯೇ ಡ್ಯೂಟಿ ಆಗಿ ಹೋಯಿತು. ಕಾಫಿ ಸಿಗರೇಟಿನ ಸರಬರಾಜನ್ನು ಮುಫತ್ತಾಗಿ ಮಾಡುವುದು ಎ. ಎಸ್. ಐ. ನ ಆದ್ಯ ಕರ್ತವ್ಯವಾಯಿತು. ತಾರತಮ್ಯವಿಲ್ಲದೆ ಸಿಬ್ಬಂದಿ ವರ್ಗದ ಮೇಲೆ, ಎರ್ರಾ ಬಿರ್ರಿಯಾಗಿ ಪೋಲೀಸ್ ಭಾಷೆಯನ್ನು ಬಳಸಿ, ದಬ್ಬಾಳಿಕೆ ನಡಸು ತ್ತಿದ್ದ ಎಸ್. ಐ. ಸಾಹೇಬರನ್ನು ನೋಡಿದರೆ ಸಾಕು. ಪಾಟೀಲನಿಗೆ ಏಳರ ಛಳಿ ಶುರುವಾಗುತ್ತಿತ್ತು.

ಕೆಲಸವಿಲ್ಲದ ರುದ್ರಮುನಿಯ ಕೈಗೆ ಒಂದು ದಿನ ಅಬ್ಕಾರಿಯೊಬ್ಬ ಸಿಕ್ಕಿಕೊಂಡ. ಯಾವ ಕೇಸೋ ಏನು ಕಥೆಯೋ ಎಸ್. ಐ. ಅವನನ್ನು ಲಾಕಪ್ಪಿನೊಳಗೆ ದೂಡಿದ. ಬೂಟ್ಸು ಕಾಲಿನಿಂದ ಒದ್ದು ಕೆಡವಿದ. ಥರ್ಡ್ ಡಿಗ್ರಿ ಫಾರ್ಮುಲಾದಲ್ಲಿ ಬರುವ ದಂಡನೆಯೆಲ್ಲಾ ಅವನಿಗೆ ಕೊಟ್ಟ. "ನಾನು ನಿರಪರಾಧಿ ಸ್ವಾಮಿ" ಎಂದು ಅವನು ಗೋಳಿಟ್ಟರೂ ಕೇಳದೆ ಅವನ ಹಣೆಯನ್ನು ಗೋಡೆಗೆ ಘಟ್ಟಿಸಿದ, ಆ ವ್ಯಕ್ತಿ ಹಿಂಸೆಯನ್ನು ತಾಳಲಾಗದೆ, ಲಾಕಪ್ಪಿನಲ್ಲೇ ಪ್ರಾಣಬಿಟ್ಟ. ಹೆಣವನ್ನು ಠಾಣೆಯಿಂದ ಹೊರಗೆ ಎಸೆಯುವ ಮೊದಲೇ ವಿಷಯ ಗುಲ್ಲಾಗಿ ಹೋಯಿತು. ಜನ ಸೇರಿತು. ಸಿ. ಓ. ಡಿ. ಅಧಿಕಾರಿಗಳು ಓಡಿಯೋ ಬಂದರು. ತನಿಖೆಗೆ ಶುರು ಹಚ್ಚಿದರು. ರುದ್ರಮುನಿಯಿಂದ ಹಿಡಿದು ಪಿ. ಸಿ. ಗಳ ವರೆಗೆ ಎಲ್ಲರನ್ನು ಅಮಾನತುಗೊಳಿಸಿ ಮನೆಗೆ ಕಳುಹಿಸಿದರು. ರುದ್ರಮುನಿಯ ರಾಕ್ಷಸ ದರ್ಬಾರಿನಲ್ಲಿ ಏನೂ ಅರಿಯದ ಎ. ಎಸ್. ಐ. ಪಾಟೀಲನೂ ಸಸ್ಪೆಂಡಾಗಿ ಮನೆ ಸೇರಿದ.

ಪಾಟೀಲ ಬದಲಾವಣೆಯನ್ನು ಬಯಸಿದ್ದ ದಿಟ. ಅದಕ್ಕಾಗಿ ಹರತರದೂದು ನಡೆಸಿದ್ದೂ ದಿಟ. ಆದರೆ ಈ ನಮೂನೆಯ ವಿಪರೀತ ಬದಲಾವಣೆಯಾದಾಗ, ಅವನಿಗೆ ಜೀರ್ಣಿಸಿಕೊಳ್ಳಲಾಗಲಿಲ್ಲ, ಪೂರ ಪಗಾರ ಬರುತ್ತಿದ್ದಾಗಲೇ ಸಂಸಾರ ರಥವನ್ನು ಎಳೆಯಲು ತಿಣುಕಾಡುತ್ತಿದ್ದ ಅವನಿಗೆ ಈಗ ಮೂರನೇ ಒಂದು ಭಾಗದ ಸಬ್‌ಸಿಸ್ಟೆನ್ಸ್ ಅಲೋಯನ್ಸ್ ತೆಗೆದುಕೊಂಡು ಸಂಸಾರ ತೂಗಿಸುವುದು ಹೇಗೆಂಬುದೆ ಬಗೆ ಹರಿಯದ ಸಮಸ್ಯೆಯಾಗಿತ್ತು. ರಾಘವಾಚಾರ್ಯರ ಘನತೆಯನ್ನು ತಿಳಿದುಕೊಳ್ಳದೆ ಅವರ ಎತ್ತಂಗಡಿಯನ್ನು ಬಯಸಿದ್ದು, ತನ್ನ ಮುಟ್ಠಾಳ ತನದ ಪರಮಾವಧಿಯೆಂಬುದು ಎ. ಎಸ್. ಐ. ಪಾಟೀಲನಿಗೆ ಬಲು ಲೇಟಾಗಿ ಅರ್ಥವಾಯಿತು.

ಬಾಳು

ಈ ಬಾಳಿನಲಿ ಮುಂದಡಿಯಿಡುವುದು
ಒಂದು ಹೆಮ್ಮೆ !
ಆದರೂ ಆಗಾಗ ಹಿಂದಿರುಗಿ
ನೋಡು, ಒಮ್ಮೆ !

-ರಾ. ಪು. ನಂ.

ಮೀ(ಮಾಂ)ಸೆ

ಚಂಚಲಾ ಶ್ರೀಕಂಠಯ್ಯ –ಸುರತ್ಕಲ್

ಚಿಂಕ್ಕಂದಿನಿಂದಲೇ ಮೀಸೆಯನ್ನು ಕಂಡರೆ ನನಗಾಗದು. ಆಗ ಅದರ ಕಾರಣವನ್ನು ಅರಿಯದೇ ಆಶ್ಚರ್ಯ ಪಟ್ಟಿದ್ದೆ. ಈಗೀಗ ಅದರ ಬಗ್ಗೆ, ಯಾಕೆ ನನಗಷ್ಟು ಅಸಹನೆಯಿತ್ತು ಎಂಬುದು ಸ್ಪಷ್ಟವಾಗುತ್ತಿದೆ. ಆಗೆಲ್ಲಾ ಮೀಸೆ ಹೊತ್ತವರನ್ನು ವರಿಸಲಾರೆ ಎಂದು ಭೀಷ್ಮ ಪ್ರತಿಜ್ಞೆ ಮಾಡಿದ್ದೆ. ಸುಮ್ಮನಿರಲಾರದೆ ನನ್ನ ಸೋದರಮಾವ 'ನೋಡು, ಈ ಅಸಾಧ್ಯ ಹುಡುಗಿಯನ್ನು ಮೀಸೆ ಹೊತ್ತವನು ಮಾತ್ರ, ಹೊತ್ತು ಸಂಭಾಳಿಸ ಬಲ್ಲ'ನೆಂದು ನನ್ನನ್ನು ವ್ಯಾಖ್ಯಾನಿಸಿದ್ದ, ಕಡೆಗೆ ನಾನು ವರಮಾಲೆ ಹಾಕಿದ್ದು, ನನ್ನ ದಢೂತಿ ದೇಹಕ್ಕನುಗುಣವಾಗಿ ಹೊತ್ತಿದ್ದ ಮೀಸೆರಾಯನನ್ನೇ!! ಈ ಮೀಸೆಯ ಸ್ವಾಮಿತ್ವ ನನ್ನದಾದ ಮೇಲೆ ವಿವರಣೆಗೆ ನಿಲುಕದ ಅಸಹನೆಯೂ ಅಥವಾ ದ್ವೇಷವೂ (ನನಗದು ಸ್ಪಷ್ಟವಿಲ್ಲ) ಬೆಳೆದು ಹೆಮ್ಮರವಾಗಿದೆ. ಈವರಗೆ ನಾನು ಮೀಸೆಯ ಬಗ್ಗೆ ಅಸಹನೆ ತೋರಿದಷ್ಟು ಮತ್ತಾರೂ ಅದನ್ನು ಅಸಹ್ಯಿಸಿ ಕೊಂಡ 'ಇನ್‌ಫರ್‌ಮೇಶನ್ ಡಾಟ' ನನಗೆ ಸಿಕ್ಕಿಲ್ಲ.

ಈ ಮೀಸೆ' ಆಂಡಮ್ ಆಂಡ್ ಈವ್'ನಷ್ಟೇ ಹಳೆಯದೆಂದು ನನ್ನ ಅನ್ನಿಸಿಕೆ. ಆಕಾಲದಲ್ಲಿ ಗಡ್ಡ ಮತ್ತು ಮೀಸೆಗೆ ಏಕ ಸಾಮ್ಯವಿದ್ದು, ಅನ್ಯೋನ್ಯತಾ ವಾಸ್ತವ್ಯದಿಂದ ಮುಖಾರವಿಂದಕ್ಕೊಂದು ಲಕ್ಷಣ ಕೊಟ್ಟಿತ್ತು, ಮುಂದೆ ಮಾನವ ನಾಗರೀಕತೆಯನ್ನು ತನ್ನದಾಗಿ ಮಾಡಿ ಕೊಂಡಂತೆ ಇವೆರಡರ ನಡುವೆ ಬಿರುಕು ಮಾಡಿ ಗಡ್ಡ ಅಳಿದು ...ಈ ಮೀಸೆ ಉಳಿದು... ವಿವಿಧ ರೀತಿಯಲ್ಲಿ ಮತ್ತು ಭಂಗಿಯಲ್ಲಿ ಚಿಗುರಿ, ಬೆಳೆಯುತ್ತಾ ಆಧುನಿಕತೆಯನ್ನು ಮೈಗೂಡಿಸಿ ಕೊಂಡಿದೆ. ಈ ಅಣ್ಣ-ತಮ್ಮಂದಿರಂತಿದ್ದ ಗಡ್ಡ-ಮೀಸೆಯು, ಭಾರತ-ಪಾಕಿಸ್ತಾನದಂತೆ ವಿಭಜನೆ ಗೊಂಡಿದೆ. ಚರಿತ್ರೆ ಮರುಕಳಿಸುವುದಂತೆ ! ಆದರಂತೆ ಈಗ ಗಡ್ಡವೂ ಅತ್ಯಾಧುನಿಕತೆಯ ಸಂಕೇತವಾಗಿ ಮೀಸೆಯ ಜೊತೆ ಪೈಪೋಟಿ ನಡೆಸಿದೆ. ಈಗ ನಾ ಹೇಳ ಹೊರಟಿರುವುದು ನನ್ನ ಸ್ವಾಯತ್ತೆಯಲ್ಲಿರುವ ಮೀಸಾ ಮೀಮಾಂಸೆ ಮಾತ್ರ ! (ಮೀಸೆ ಹೊತ್ತವರೇ ದಯವಿಟ್ಟು ನನ್ನ ಕ್ಷಮಿಸಿ).

ಈ ಧೂಮಪಾನ ಮತ್ತು ಮದ್ಯಪಾನದ ವ್ಯಸನಿಗಳ ದುರಭ್ಯಾಸವನ್ನು ಸುಲಭವಾಗಿ ಬಿಡಸ ಬಹುದೇನೊ, ಅವರುಗಳಿಗೆ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ಇರುತ್ತೆ, ಆದರೆ ಮೀಸೆಯಿಂದ ಹುಟ್ಟಿ ಕೊಂಡ ದುರಬ್ಯಾಸ ಅಥವಾ ದುಶ್ಚಟಕ್ಕೆ ಯಾವ ಭಾದ

ಕಷ್ಟ ಇಲ್ಲದಿರುವುದರಿಂದ, ಈ ಕುಚೇಷ್ಟೆಯನ್ನು ಸುಲಭದಲ್ಲಿ ಬಿಡಿಸಲಾಗದು. ಅದು ಅನುಭವ ವೇದ್ಯವೇ ಆಗಬೇಕು. ನಾನು ಮೀಸೆರಾಯನನ್ನು ಮೆಚ್ಚಿ ಕೊಂಡಿದ್ದರಿಂದ, ಅವರ ಮೀಸೆ ಸೂತ್ರ ನನ್ನ ದ್ವೇಷಕ್ಕೆ ಪಾತ್ರವಾಯಿತು. ಮನೆ ತುಂಬಿಸಿ ಕೊಂಡ ಅತ್ತೆ ನನಗೆಂದೂ ಪ್ರತಿಸ್ಪರ್ಧಿಯಾಗಲಿಲ್ಲ, ಈ ಮೀಸೆ ಮಾತ್ರ ಪ್ರತಿಸ್ಪರ್ಧಿಯಾಗಿ ನನ್ನ ಅಜಾತ ಶತ್ರುವಿನಂತೆಯೇ ಉಳಿದು, ನನ್ನನ್ನು ಸತಾಯಿಸುತ್ತಿದೆ. ಇದು ಕೊಡುವ ಕಿರುಕುಳವನ್ನು ಸಹನೆಯಿಂದಲೇ ಸಹಿಸುತ್ತಾ, ನಡು ವಯಸ್ಸಿನಲ್ಲಿ ನಿಂತಿದ್ದೇನೆ. ಶುಭಗಳಿಗೆ ಸಿಕ್ಕಾಗಲೆಲ್ಲಾ ಆ ದರಿದ್ರ ಮೀಸೆಯನ್ನು ಬೋಳಿಸಲು ಬೋಧಿಸಿದ್ದು, ಅವರ ಕಿವಿಯ ರಂಧ್ರವನ್ನು ತಲುಪಲು ಅಶಕ್ತವಾದವು. ಇದರ ಸರ್ವನಾಶಕ್ಕೆ ಕಂಡ ಕಂಡ ದೇವರಲ್ಲಿ, ಮೀಸೆಯನ್ನೇ ಮುಡಿಪಿಟ್ಟು, ಮುಡಿ ಕೊಡುವುದಾಗಿ ಹರಕೆ ಹೊತ್ತಿದ್ದು, ಆ ಹರಕೆಯನ್ನು ತೀರಿಸಲು ಸಾಧ್ಯವಾಗೇ ಇಲ್ಲ. ಮೀಸೆ ಇದ್ದರೆ ತಾನೇ ಎಲ್ಲಾ ತರಹದ ದುರಭ್ಯಾಸ, ತಾಪತ್ರಯ ! ಅದರ ಬೆಳವಣಿಗೆಯನ್ನೇ ಕುಂಟಿತಗೊಳಿಸಿದರೆ, ನಾನು ನೆಮ್ಮದಿಯಿಂದ ಇರಲು ಸಾಧ್ಯವೆಂದು ಅನೇಕ ಉಪಾಯ ಹೂಡಿಯೂ ಆಯಿತು. ಉಹೂಂ ! ಏನೂ ಪ್ರಯೋಜನ ಕಾಣದು, ಮೀಸೆರಾಯ ಗೊರಕೆ ಸಾಮ್ರಾಜ್ಯದಲ್ಲಿದ್ದಾಗ. ಅದಕ್ಕೆ ಜೇನುತುಪ್ಪವನ್ನು ಸವರಿ ಇರುವೆಗಳಿಗೆ ಆಹಾರವನ್ನೊದಗಿಸಿದೆ, ಇರುವ ಸೈನ್ಯ ಸಮೇತ ಬಂದವು... ಬಲು ಜಾಣತನದಿಂದ ಮೀಸೆಗೆ ಅಂಟಿದ್ದ ತುಪ್ಪವನ್ನು ಹೀರಿ ತಮ್ಮ ಕಾರ್ಯ ವೈಖರಿಯನ್ನು ತೋರಿ ಜಾಗ ಖಾಲಿ ಮಾಡಿದವು. ನೊಣಗಳು ಜೇನಿಗೆ 'ಜ್ಯಯರ್' ಗುಟ್ಟಿದಾಗ, 8-10 ಡಿಗ್ರಿ ಸೆಲೇಸಿಯಸ್ ಚಳಿಯಲ್ಲೂ ಫ್ಯಾನ್ ಚಾಲೂ ಮಾಡಿ ಅದರ ಕಾಟವನ್ನು ಸಹಿಸಿಕೊಂಡರು. ಬೆಕ್ಕಿನ ಮೀಸೆಯಂತಿದ್ದ ತಮ್ಮ ಮೀಸೆಯ ಬಗ್ಗೆ ನನ್ನ ಅವಿವೇಚನೆ ಮೂಡಿಸಲು ಯತ್ನಿಸಿ ಸೋತರು.

ವಿರಾಮದಲ್ಲಿ ಕೂತಾಗ ಕ್ಲೀನ್‌ಕಟ್ ಮೀಸೆಯನ್ನು ಎಳೆದು ಎಳೆದು, ಅದರ ಭದ್ರಾ-ಭದ್ರತೆಯನ್ನು ಪರೀಕ್ಷಿಸುವ (ದುರ) ಅಭ್ಯಾಸವಾಗಿದೆ. ಮೀಸೆಯೊಂದಿಗೆ ಸುಖಿಸುತ್ತಾ, ಅಲೌಕಿಕ ತನ್ಮಯತೆಯೊಳಗೆ ಜಾರಿ ಕೊಳ್ಳುವುದೂ ಇದೆ. ಈ ಭಾವ ಸಮಾಧಿಯಿಂದ ಬಹ್ಯ ಪ್ರಪಂಚಕ್ಕೆ ಎಳೆದು ತರುವ ಕೆಲಸವಿದೆ ನೋಡಿ ; ಎಷ್ಟು ಕಷ್ಟದ ಕೆಲಸವೆಂದರೆ ಅಮಲಿನವರನ್ನು ಜಾಗೃತಾವಸ್ಥೆಗೆ ತಂದಷ್ಟೆ ತ್ರಾಸಧಾಯಕ, ಮೀಸೆಯನ್ನು ಎಳೆದು..., ಈಗ ಎಳೆ ಎಳೆಯಾಗಿದ್ದು, ಈಗ ಅದರ ಬುಡಸತ್ವ ಹೀನವಾಗಿದೆ. ಕೆಲವು ಮೀಸೆ ಎಳೆಗಳು ಅವರ ಕೈಗೆ ಸಿಕ್ಕಿ ನಲುಗಿಯೂ ಏನೂ ಅದರ ಸ್ಥಳ ಕತ್ತರಿಸಿದ ಹುಲ್ಲಿನ ಜಾಗದಂತೆ ಬೋಳು ಬೋಳಾಗಿದೆ. ಇದನ್ನು ನೋಡಲಾರದೇ "ಯಾಕ್ರೀ, ಹೀಗೆ ಮೀಸೆಯನ್ನು ಎಳೆದು ಅದರ ಪ್ರಾಣ ತೆಗೀತೀರಾ... ಅದರ

ಪಾಡಿಗೆ ಅವನ್ನು ಬಿಡಬಾರದೆ ?" ಎಂದ ಮೀಸೆ ಪಕ್ಷವಹಿಸಿದೆ. "ನಿನಗೆ ನನ್ನ ಮೀಸೆಯ ಮೇಲೆ ಸದಾ ಕೆಂಗಣ್ಣು, ನನ್ನ ಮೀಸೆ ನನ್ನದು, ಅದನ್ನು ಏನು ಬೇಕಾದರೂ ಮಾಡಿ ಕೊಳ್ಳುತ್ತೀನಿ ನಿನಗೇನು? ನಿನಗೆ ಆ ಭಾಗ್ಯವಿಲ್ಲಾಂತ ಹೊಟ್ಟೆಕಿಚ್ಚು ಅಷ್ಟೇ" ಎಂದು ತಮ್ಮ ಕಾರ್ಯವನ್ನು ಮುಂದುವರಿಸಿದರು. ಅಮಲಿನ ಸ್ವಾದಿಷ್ಟತೆಯಲ್ಲಿ ನರಳುವವರ ರೀತಿ ಇದೆಂದು ಕ್ಷಮಿಸಿ ಬಿಟ್ಟಿದ್ದೇನೆ.

ಒಮ್ಮೆ ವೈಶಿಷ್ಟ್ಯ ಪೂರ್ಣ 'ಸುರಭಿ' ಕಾರ್ಯಕ್ರಮವನ್ನು ವೀಕ್ಷಿಸಲು ಕೂತೆವು. ಆ ಕಾರ್ಯಕ್ರಮದಲ್ಲಿ ವಿವಿಧ-ರೀತಿಯ 'ಮೀಸಾ' ವೈಶಿಷ್ಟತೆಯನ್ನು ತೋರಿಸ ಬೇಕೆ ? ಇವರಿಗೊ ಹಿಗ್ಗೋ-ಹಿಗ್ಗು !! ಅಪರೂಪದ-ಅಪೂರ್ವ ಮೀಸೆ ಹೊತ್ತವನೊಂದಿಗೆ ಸಂದರ್ಶನ ಬೇರೆ ಇತ್ತು. ಈ ಅಪೂರ್ವ ಮೀಸೆ ಹೊತ್ತ ಮೀಸೆರಾಯ ತನ್ನ ಮೀಸೆಯ ಸುರುಳಿಯನ್ನು ಒಂದೊಂದಾಗಿ ಬಿಡಿಸಿ, ಉದ್ದಕ್ಕೆ ಮಂಡಿಯಿಂದ ಕೆಳಗಿನ ವರೆಗೆ ನೆಲ ಸೋಕುವಂತೆ ಇಳಿಸಿದ. ಅಭಿಮಾನದಿಂದ ಅದರ ಪಾಲನೆ ಪೋಷಣೆಯ ಬಗ್ಗೆ ವಿವರಿಸಿದ. ಈ ಗೀಜಗನ ಗೂಡಿನಂತಿರುವ ಮೀಸೆ ಪೊಟರಿನಲ್ಲಿ ಹಕ್ಕಿ ಎಷ್ಟು ಬೇಕಾದರೂ ಮೊಟ್ಟೆಯಿಡ ಬಹುದೆಂದು ತರ್ಕಿಸಿದೆ. ಮತ್ತೊಂದು ಮೀಸೆಯ ಸುರಳಿ ಭಾಗದಿಂದ ಬೆಟ್ಟದ ನಲ್ಲಿಕಾಯಿ ಗಾತ್ರದ ನಿಂಬೆ ಹಣ್ಣನ್ನು ಚಮತ್ಕಾರದಿಂದ ತೆಗೆಯುವ ಜಾದುಗಾರನಂತೆ ತೆಗೆದು ಸಂದರ್ಶಕರ ಕೈಯಲ್ಲಿಟ್ಟ, ಸಂದರ್ಶಕರು "ಉನ್ ಕೆ ದೇಖ್ ಬಾಲ್ ಕೈಸೆ ಕರೇಂಗೆ ? ಎಂಬ ಪ್ರಶ್ನೆಗೆ ? ಎಂಬ ಪ್ರಶ್ನೆಗೆ ಜಂಬ ದಿಂದ 'ಮೇರಿ ಬೀಬಿ ಉನ್‌ಕೆ ದೇಖ್ ಬಾಲ್ ಕರೇಂಗಿ" ಅನ್ನಬೇಕೆ ? ನನ್ನ ದುರಾದೃಷ. ನನ್ನ ಮೀಸೆರಾಯ ವಿಜಯದ ನಗೆ ಬೀರುತ್ತಾ "ನೋಡು ತಾಯೇ, ಆದರ್ಶ ಪತ್ನಿಯರು ನಮ್ಮದೇಶದಲ್ಲಿ ಅಖಂಡವಾಗಿದ್ದಾರೆ. ನೀನು ಇದ್ದೀಯೊ...ನನ್ನ ಮೀಸೆ ಕಂಡರೆ ಸವತಿಯನ್ನು ಕಂಡಂತೆ ಉರಿದು ಬೀಳುತ್ತೀಯೊ" ಎಂದು ಹಂಗಿಸುತ್ತಾ, ಮೀಸೆಯ ವಿಜಯವನ್ನು ವಾಖ್ಯಾನಿಸಿ ನನಗೆ ಅರಿವು ಮೂಡಿಸಲು ಪ್ರಯತ್ನಿಸಿದರು.

ಈ ಮೀಸಾ ವ್ಯಾಖ್ಯಾನ ನನ್ನ ಮೇಲೆ ಸ್ವಲ್ಪ ಪ್ರಭಾವ ಬೀರುತಿತ್ತು. ಅವನ್ನು ಬುಡ ಮೇಲು ಮಾಡುವಂತಾ ಮತ್ತೊಂದು ಘಟನೆಯು ನನ್ನ ಸಂತಸ ಸಾಗರಕ್ಕೆ ನೂಕಿತು. ನನ್ನ ಮೈದ ಅವನ ಕುಟುಂಬ ನಮ್ಮಲ್ಲಿಗೆ ಬಂದರು. ಮೈದನ ಮಗಳು ಚಿಂಕಿ ಬಲು ಚುರುಕಿನ ಹತ್ತು ವರ್ಷದ ಹುಡುಗಿ, ನಾವೆಲ್ಲಾ ಒಟ್ಟಾಗಿ ಕೂತು ಹಾಲಿನಲ್ಲಿ ಹರಟೆ ಹೊಡೆಯುತ್ತಿದ್ದೆವು. ಗಂಡಸರು ನೆಪಕ್ಕೊಂದು ಪೇಪರು, ಪುಸ್ತಕವನ್ನು ಕೈಯಲ್ಲಿ ಹಿಡಿದು ಟಿ. ವಿ. ಯನ್ನು ನೋಡುತ್ತಿದ್ದರು. ಟಿ. ವಿ. ಯನ್ನು ನೋಡುತ್ತಿದ್ದ ಚಿಂಕಿ, ತನ್ನ ಕೈಯಿಂದ ನವಿರಾಗಿ ತನ ಮೇಲ್ತುಟಿಯನ್ನು ಸವರಿ

ಕೊಂಡು, ಏನೊ ನಟನೆ ಮಾಡುತ್ತಾ ಮುಸಿ ಮುಸಿ ನಗಲು ಶುರುಮಾಡಿದಳು. ಅದು ಅನುಕ್ರಮವಾಗಿ ದೊಡ್ಡ ದಾಗುತ್ತಾ ನಮ್ಮ ಗಮನವನ್ನು ಸೆಳೆದುಕೊಂಡಿತು. ಅವಳ ತಾಯಿ ಮಗುವಿನ ವರ್ತನೆ ಅರ್ಥವಾಗದಂತೆ "ಮಾಮೂಲಿ ತಾನೇ ? ಎನ್ನುತ್ತಾ, ತನ್ನ ನಗುವನ್ನು ಜೊತೆಗೂಡಿಸಿದಳು. ಅರ್ಥವಾಗದ ನಾನು "ಏನೇ ಅದು ? ಗುಟ್ಟು ? ಎಂದು ಗುಟುರು ಹಾಕಿದೆ. "ಆಂಟೀ, ದೊಡ್ಡಪ್ಪ ಅಣ್ಣ ಮುಕುಲ್ ಸಹ ನಮ್ಮ ಪಪ್ಪನ ತರಹನೇ ತಮ್ಮ ಮೀಸೆಯನ್ನು ಎಳೆದುಕೊಳ್ಳುತ್ತಿದ್ದಾರೆ. ನಮ್ಮ ಪಪ್ಪ ಮೀಸೆ ಎಳೆದು ಕೊಂಡಾಗಲೆಲ್ಲಾ ನಮ್ಮ ಮಮ್ಮಿ ಅವರ ಕೈ ಮೇಲೆ ಪೆಟ್ಟು ಕೊಡುತ್ತಾರೆ. ಈಗ ನೀವು ಇವರಿಬ್ಬರಿಗೆ ಯಾವ ಪನಿಶ್‌ಮೆಂಟ್ ಕೊಡುತ್ತೀರಾ" ಎಂದು ಗಂಡಸರ ಕಡೆ ಕೈ ತೋರಿಸಿದಳು ತುಂಟಿ. ನೋಡಿದರೆ-ಬೀಳಿ ಮೀಸೆಗಂಡ, ಕರೀಮೀಸೆ ಹೊತ್ತ ಮೈದ, ಜೊತೆಗೆ ಎಳೀ ಚಿಗುರು ಮೀಸೆ ಮೂಡುತ್ತಿದ್ದ ಮಗರಾಯ, ಮೂವರೂ ತಮ್ಮ ತಮ್ಮ ಮೀಸೆಯ ಮೇಲೆ ಕೈಯಾಡಿಸುತ್ತ, ಎಳೆದುಕೊಳ್ಳುತ್ತಿದ್ದಾರೆ. ಮೂರುಮಂದಿಯ ಜುಗಲ್‌ಬಂದಿ ತಾಕಿರ್ ವ್ಯಾಪ್ಯಾರದ ಗೊಡವೇಯಿಲ್ಲದೆ ಅವ್ಯಾಹತವಾಗಿ ಸಾಗುತ್ತಿವೆ. ನನಗೆ ತಟ್ಟನೆ ನೆನಪಿಗೆ ಬಂದದ್ದು, ಕೆಲವು ವರ್ಷಗಳ ಹಿಂದೆ. ಕಪೂರ್ ನಿರ್ಮಿಸಿದ್ದ 'ಕಲ್, ಆಜ್ ಔರ್ ಕಲ್' ಚಿತ್ರ ! ! ! ಆ ಚಿತ್ರವನ್ನು ನೋಡಿ ಆ ಅನುವಂಶಿಕ ನಟನಾ ಕೌಶಲಕ್ಕೆ ಮನ ಸೋತಿದ್ದೆ. ಆದರೆ ಈ ಅನುವಂಶಿಕ ವ್ಯಾಪಾರ ಕಂಡು.........ಹೋಗಲಿ ಬಿಡಿ, ಎಷ್ಟು ವ್ಯಸನ ತೋಡಿಕೊಂಡೇನು ಫಲ ?

ಇಷ್ಟು ದಿನವೂ ಮೀಸೆಯ ಮೇಲಿದ್ದ ಅಸಹನೆ ಭಾವದೊಂದಿಗೆ, ಈಗಸಂಕಟವೂ ಜೊತೆಗೂಡಿದೆ.

ನಾವಾರು ನೀವಾರು ?

ಹಲವಾರು ಜಾತಿಗಳು
ಹೊಡೆದಾಡುತಿಹ ನಾಡಿನಲಿ
ಕವಿಯೊಬ್ಬ ಯೋಚಿಸಿದ–
"ಬರೆಯೋಣ ಕವನವನು !
ನಾವಾರು, ನೀವಾರು ?"
ಕುಹಕಿಯೊಬ್ಬ ನುಡಿದ ;
"ಸೇರಿ ಆಗುವುದೊಂದು ಡಜನು !"

ರಾ.ಪು.ನಂ.

ಹೊಸಗನ್ನಡಕ್ಕೆ ಹೊಸಪದಗಳು

ಶಿವು

ಕನ್ನಡ ಸೇವೆಗೆ ಸದಾ ಕಂಕಣ ಬದ್ಧಳಾಗಿರುವ ಅಪರಂಜಿ ಎಂದಿನಂತೆ ಈ ಬಾರಿಯೂ ಹಲವು ಹೊಸ ಪದಗಳನ್ನು ನೀಡುತ್ತಿದ್ದಾಳೆ. ಈ ಪದಗಳ ಬಳಕೆಯಿಂದ ಸಮಕಾಲೀನ ಪರಿಸ್ಥಿತಿಯ ಅರ್ಥ ಚೆನ್ನಾಗಿ ಆಗಲಿ ಎಂಬುದು ನಮ್ಮ ಆಶಯ.

೧ **ಎನ್ರಾನಿಸು :-**ಭಾಷೆಕೊಟ್ಟ ನಂತರ, ನಡೆಸಿಕೊಡುವುದಕ್ಕಾಗದಿದ್ದರೆ, ಪಿಳ್ಳೆ ನೆವ ಹೇಳಿ ನುಣುಚಿಕೊಳ್ಳುವ ಜಾಣತನ.

ಉದಾ :-"ನಮ್ಮ ಕಿರಣ್ ನೋಡಿ. ಎಂಥಾ ಜಾಣ ಅಂತ. ಬುಗುರಿ ಕೊಟ್ರೆ, ಸ್ಲೇಟ್ ಕೊಡ್ತೀನಿ ಅಂತ ನೀಲಾಭ್‌ಗೆ ಹೇಳಿ, ಕೊನೆಗೆ ಬುಗುರಿ, ಸ್ಲೇಟು ಎರಡನ್ನೂ ಎನ್ರಾನಿಸಿಕೊಂಡು ಬಂದ್ಬಿಟ್ಟಾರೀ"

೨ **ಧಬೋಲೀಕರಣ :-**ದುಡ್ಡು ಸಾಲದೇ ಬಂದು, ಕಟ್ಟಡದ ಕೆಲಸವನು ಅರ್ಧಕ್ಕೆ ನಿಲ್ಲಿಸಬೇಕಾದ ಸ್ಥಿತಿ.

ಉದಾ : "ನಮ್ಮ ಭಾವ ಕ್ಯಾನ್‌ಫಿನ್ ಹೋಮ್‌ನಲ್ಲಿ ಸಾಲಸಿಗುತ್ತೆ ಅಂತ ಆಶೆ ಇಟ್ಕೊಂಡು ಮನೆ ಕಟ್ಟುಕ್ಕೆ ಶುರುಮಾಡಿದ್ರು ಗುರು. ಅದೇನು ದುರದೃಷ್ಟಾನೋ ಸಾಲ ಸ್ಯಾಂಕ್ಷನ್ ಆಗ್ಲೇ ಇಲ್ಲ. ಮನೆ ಧಬೋಲೀಕರಣವಾಗಿ ಕೂತಿದೆ"

೩ **ಯಡಿಯುೂರಾಟ :-**ಕಾರಣವಿಲ್ಲದೇ ರೇಗಿಸಿ, ತೊಂದರೆಗೆ ಸಿಕ್ಕಿಕೊಳ್ಳೋದು. ನಮಾಜು ಮಾಡುಕ್ಕೆ ಹೋಗಿ ಮಸೀದಿ ಕೆಡವಿಕೊಂಡ ಸಮಾಚಾರ.

ಉದಾ :-"ನಮ್ಮ ಪ್ರವೀಣ ತೀರಾ ತುಂಟ ರೀ.ಮೊನ್ನೆ ಪಕ್ಕದ ಮನೆ ಶಾಂತವೀರಪ್ಪನೋರ ಮೀಸೆ ಚಿತ್ರಾನ ಅವರ ಮನೆ ಗೋಡೇಮೇಲೆ ಬರೀತಾ ಇದ್ದಾಗ, ಶಾಂತ ವೀರಪ್ಪ ನೋರ ಕೈಗೇ ಸಿಕ್ಕಿ ಹಾಕ್ಕೊಂಬಿಟ್ಟ. ಹುಡುಗಾಟ ಹೋಗಿ ಎಡಿಯೂರಾಟ ಆಗ್ಹೋಯ್ತು.

೪ **ಮೂರ ಹಿಂಸೆ :** ಟೆಲಿ ಮಾರ್ಕೆಟಿಂಗ್ ಎಂಬ ಅಮೆರಿಕಾದಿಂದ ಆಮದು ಮಾಡಿಕೊಂಡ ಚಿತ್ರ ಹಿಂಸೆಯನ್ನು ನಮ್ಮ ದೂರವಾಣಿ ಮೂಲಕ ಮನೆ ಮನೆಗೂ ತಲುಪಿಸುವ ಕ್ರಿಯೆ.

ಉದಾ :- ಅಗತ್ಯವಿಲ್ಲ.

೫ **ಶೇಷಾಗ್ರತೆ** :-ಏಕಾಗ್ರತೆಯಿಂದ ಕೋರ್ಟಿಗೆ ಓಡಾಡೋ ಹವ್ಯಾಸ.

ಉದಾ :-"ನಮ್ಮ ಚೆಂಗಪ್ಪ ನೋಡ್ರಿ. ಅಪ್ಪ ಕಟ್ಟಿಸಿ ಕೊಟ್ಟ ಐದಾರು ಮನೆ ಗಳನ್ನ ಪೆಚ್ಚು ಪೆಚ್ಚಾಗಿ ಬಾಡಿಗೆಗೆ ಕೊಟ್ಟು ಈಗ ದಿನಬೆಳಗಾದರೆ ಶೇಷಾ ಗ್ರತೆಯಿಂದ ಕೋರ್ಟಿಗೆ ಅಲೀತಿದಾನೆ"

೬ **ಮಂತ್ರಿಗತಿ** :-ತೀರಾ ನಿಧಾನವಾಗಿ ಕೆಲಸ ಸಾಗುವ ರೀತಿ.

ಉದಾ ;-"ನಮ್ಮ ಕೆಮಿಸ್ಟ್ರಿ ಲೆಕ್ಚರರು, ನೈಟ್ರಿಕ್ ಆಸಿಡ್‌ನ ನೀರಿಗೆ ಬೆರಸುವಾಗ ತೀರಾ ಸಾವಧಾನವಾಗಿ ಮಂತ್ರಿಗತಿಯಿಂದ ನಡೆಸಬೇಕು ಅಂತ ಎಚ್ಚರಿಕೆ ಕೊಟ್ಟಿದ್ರಪ್ಪ"

೭ **ಜಿ ಜಿ ವಿನ್ಯಾಸ** :-ಅತ್ಯಂತ ಬೃಹತ್ತಾದ ಕಟೌಟ್‌ಗಳಿಂದ ನಗರವನ್ನು ಸಿಂಗರಿ ಸುವ ರೀತಿ

ಉದಾ :- ಡೆಲ್ಲಿಗೆ ಬಿಲ್ ಕ್ಲಿಂಟನ್ ಬಂದಾಗ ರಾಜ ಬೀದೀಲೆಲ್ಲಾ ಜೆ ಜೆ ವಿನ್ಯಾಸದ ಅಲಂಕಾರ ಇರುತ್ತಂತೇ ರೀ"

೮ **ವಿಧಾನ ದ್ರವ್ಯ** : ನ್ಯೂಯಾರ್ಕಿನಲ್ಲಿ ರಾತ್ರಿ ಹೋತ್ತು ಪ್ರಯಾಣ ಮಾಡ ಬೇಕಾದರೆ, ಹಣದೋಚುವ ಕಳ್ಳರಿಗಾಗಿಯೇ ಅಂತ ಇಪ್ಪತ್ತು ಡಾಲರ್ "ಮಗ್ ಮನಿ" (Mug Money) ಇಟ್ಕೊಂಡು ಹೊರಕ್ಕೆ ಹೊರಡುವುದು ಸಂಪ್ರದಾಯವಂತೆ. ವಿಧಾನ ಸೌಧಕ್ಕೆ ಹೊರಟಾಗಲೂ............

ಸಂಪಾದಕರಿಗೊಂದು ಪತ್ರ

-ಹಾ. ರಾ.

ಪ್ರಿಯ ಸಂಪಾದಕರೇ,

ಕಾಗೆಗಳ ಆಕ್ರಮಣವನ್ನು ನಿಯಂತ್ರಿಸಲು ಪ್ರಭಾ ಎನ್ನುವವರು ತಮ್ಮ ಫ್ಯಾಕ್ಟರಿಯಲ್ಲಿ ನಡೆಸಿದ ಕೆಲವು ಪ್ರಯೋಗಗಳನ್ನು, ಕಡೆಗೆ ಗುಣನಿಯಂತ್ರಣ ವೃತ್ತದವರ ಸಲಹೆಯಂತೆ ಬಣ್ಣದ ಪಟ್ಟಿಗಳಿರುವ ತೆರೆಗಳನ್ನು ಕ್ಯಾಂಟೀನ್ ಬಾಗಿಲುಗಳಿಗೆ ಹಾಕುವುದರ ಮೂಲಕ ಕಾಗೆಗಳ ಪ್ರವೇಶವನ್ನು ತಡೆ ಹಿಡಿಯುವ ಮಹಾಕಾರ್ಯದಲ್ಲಿ ಜಯಭೇರಿ ಹೊಡಿವರೆಂಬ ಸುದ್ದಿಯು ನಮ್ಮ ಫ್ಯಾಕ್ಟರಿಯಗಳಲ್ಲೂ ಚರ್ಚೆಗೆ ಬಂದಿತು. ಅವರು ಅದನ್ನು ಸಾಧಿಸಲು ಅಷ್ಟೊಂದು ಕಷ್ಟ ಪಡುವ ಅಗತ್ಯ ಇರಲಿಲ್ಲವೆಂದೂ ಉಗುರಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡ ಹಾಗಾಯಿತೆಂದೂ, ಇಂಥ ಕ್ಲಿಷ್ಟಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಹುಡುಕುವಾಗ ಬೇರೆ ಬೇರೆ ವೃತ್ತಗಳಲ್ಲಿ ಸದಾನಿರತರಾಗಿರುವ ಪರಿಣಿತರ ಸಲಹೆಗಳನ್ನು ಪಡೆಯುವುದು ಸೂಕ್ತವೆಂದೂ ಪ್ರತಿ ಕ್ರಿಯಿಸಿರುವ ಎಂ. ಎಸ್. ಕೆ. ಎನ್ನುವವರ ಅಭಿಪ್ರಾಯಗಳನ್ನು ನಾವು ನಿನ್ನೆ ಶ್ರಾದ್ಧ ಕರ್ಮವನ್ನು ಮುಗಿಸಿ ಪಿತೃಶೇಷವನ್ನು ಭುಂಜಿಸುತ್ತಾ ಸಾವಧಾನವಾಗಿ ಅವಲೋಕಿಸಿದೆವು. ಎಂ. ಎಸ್. ಕೆ. ಯವರು ಶಾಸ್ತ್ರ ಸಮ್ಮತವಾದ ಉಚ್ಛಿಷ್ಟಪಿಂಡದ ಸಲಹೆಯನ್ನು ಮುಂದಿಟ್ಟು ಲಿವ್ ಅಂಡ್ ಲೆಟ್‌ಲಿವ್ ಎಂಬ ಮಾನವೀಯತೆಯ ಧರ್ಮಸೂತ್ರವನ್ನು ಎತ್ತಿಹಿಡಿಯಲು ಪ್ರಯತ್ನಿಸಿರುವುದು ಅಭಿನಂದನೀಯವಾದರೂ, ಯಥಾಪ್ರಕಾರ ಈ ಇಪ್ಪತ್ತನೆ ಶತಮಾನದ ಅತ್ಯಂತ ಕ್ರೂರವಾದಸಾಮಾಜಿಕ ಪಿಡುಗೆನಿಸಿವದುರ್ಬಲರಶೋಷಣೆ, ಸಂಘರ್ಷಗಳಿಗೇಬೆಂಬಲಕೊಟ್ಟಂತಾಗಿದೆ. ಒಂದಿಷ್ಟು ಉಚ್ಛಿಷ್ಟಪಿಂಡದ ಆಸೆ ತೋರಿಸಿ ಕಾಗೆಗಳನ್ನು ಓಡಿಸಲು ಪ್ರಯತ್ನಿಸುವುದುಭಾರತೀಯ ಸಂಸ್ಕೃತಿಯೇ ಅಲ್ಲ. ವೇದಗಳೂ ಈ ನೀತಿಯನ್ನು ಎಂದೂ ಪುರಸ್ಕರಿಸಿಲ್ಲ. ಕಾಗೆಗಳು ದುರ್ಬಲ ಪಂಗಡಕ್ಕೆ ಸೇರಿದುವೆಂದೂ, ಅವುಗಳನ್ನು ದೂರವಿಡಲು ಹಲವಾರು ಉಪಾಯಗಳನ್ನು ಮಾಡಿ, ಕಡೆಗೆ ಒಂದಿಷ್ಟು ಪಿಂಡದ ಅಗಳುಗಳನ್ನು ಅವುಗಳ ಮುಂದೆ ಹಾಕಿ ಮನುಷ್ಯನು ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳಲು ಹೊರಟಿರುವುದು ದುರ್ಬಲ ವರ್ಗದ ಜೀವಿಗಳ ದಮನಕ್ಕೆ ಪ್ರೇರಣೆಯೇ ಹೊರತು 'ಗೀವ್ ಅಂಡ್ ಟೇಕ್' ಎಂಬ ಉದಾರೀಕರಣ ನೀತಿಯನ್ನು ಅನುಷ್ಠಾನ

ಕ್ಕೆ ತಂದಂತಾಗುವುದಿಲ್ಲ. ಪರಿಸರ ಪ್ರೇಮಿಗಳೂ, ಪ್ರಾಣಿದಯಾ ಸಂಘದವರೂ, ಇವನ್ನು ತೀವ್ರವಾಗಿ ಖಂಡಿಸುತ್ತಾರೆ. ಕಾಗೆಗಳು ಅರಚಿ ಕೊಳ್ಳುವುದನ್ನು ನಿಲ್ಲಿಸಿ ದರೂ, ಇವರ ಕಾ ಕಾ ಕಾರ ಇಡೀ ದೇಶದಲ್ಲಿ ಮೊಳಗುವುದರಲ್ಲಿ ಸಂಶಯವಿಲ್ಲ. ಈ ವಿಷಯ ಇಷ್ಟೊಂದು ಗಾಢವಾದುದೆಂದು ನಮಗೆ ಈ ಮೊದಲು ಹೊಳೆಯಲಿಲ್ಲ. ಕ್ಯಾಂಟೀನ್ ಬಾಗಿಲುಗಳಿಗೆ ಪಟ್ಟೆಯ ತೆರೆಗಳನ್ನು ಅಳವಡಿಸಿ ಕಾಗೆಗಳನ್ನು ಫ್ಯಾಕ್ಟರಿ ದ್ವಾರದಿಂದ ದೂರ ಕಳಿಸಲು ಪ್ರಯತ್ನಿಸಿರುವುದು ಅಕ್ಷಮ್ಯ ಅಪರಾಧ. ಉಕ್ಕಿನ ತೆರೆ, ಬೆಳ್ಳಿ ತೆರೆ, ಕಿರುತೆರೆಗಳ ಪರಿಚಯವಿದ್ದ ನಮಗೆ ಈ ಕಾಗೆ ತೆರೆಗಳು ತುಂಬಾ ವಿಲಕ್ಷಣ ವಾಗಿ ಕಾಣಿಸಿದವು. ಈ ತೆರೆಗಳು ಕಾಗೆಗಳ ಉಪದ್ರವಕ್ಕೆ ಶಾಶ್ವತವಾದ ಉಪಾಯ ವೆಂದು ಫ್ಯಾಕ್ಟರಿಯ ಆಡಳಿತ ವರ್ಗ ತಿಳಿದಿದ್ದರೆ ಅದಕ್ಕಿಂತಲೂ ಮೂರ್ಖತನ ಬೇರೊಂದಿಲ್ಲ. ಯಾಕೆಂದರೆ ಈ ತೆರೆಗಳ ಬಣ್ಣದ ಪಟ್ಟೆಗಳು ಇನ್ನು ಕೆಲವೇ ದಿವಸ ಗಳಲ್ಲಿ ಬಣ್ಣವನ್ನು ಕಳೆದು ಕೊಂಡು ಜೋಲು ಮುಖ ಹಾಕಿ ಕೊಳ್ಳುತ್ತವೆ. ಫ್ಯಾಕ್ಟ ರಿಯ ಸಾವಿರಾರು ಕೆಲಸಗಾರರು ಕ್ಯಾಂಟೀನಿನಲ್ಲಿ ತಿಂಡಿ ತಿನಿಸುಗಳನ್ನು ತಿಂದ ಹೊರ ಬರುತ್ತ, ತೆರೆಗಳಿಗೇ ಕೈಗಳನ್ನು ತುರಿಕಿ ವರಿಸಿ ಕೊಳ್ಳುವಾಗ ಕೇಸರಿಭಾತು, ಪೂರಿ ಪಲ್ಯ, ಮಂಗಳೂರು ಬೋಂಡ, ಮದ್ದೂರೊಡೆಗಳ ಚೂರುಗಳು ಅವಕ್ಕೆ ಮೆತ್ತಿ ಕೊಳ್ಳುತ್ತವೆ. ಯಥಾ ಪ್ರಕಾರ ಕಾಗೆಗಳು ತೆರೆಗಳನ್ನು ಕುಕ್ಕಿ ದೊಡ್ಡ ದೊಡ್ಡ ಕಿಂಡಿ ಗಳನ್ನು ಅಂದರೆ 'ಕ್ರೋ ಹೋಲ್ಸ್' ಮಾಡಿ ಒಳಕ್ಕೆ ಪ್ರವೇಶಿಸಿ ತಮ್ಮ ಹಕ್ಕನ್ನು ದೃಢೀಕರಿಸುತ್ತಲ್ಲದೆ Q.C.C. ಗೆ ಒಂದು ಸವಾಲಾಗಿ ನಿಲ್ಲುತ್ತವೆ. ಪ್ರಾರಂಭದಲ್ಲೇ ಅವರು ಅರಿಯ ಬೇಕಾಗಿತ್ತು-ಲಂಚ್ ಅವರ್ ಸಂಪ್ರಾಪ್ತೆ, ಕಾಕಾ ಕಾಕಾಃ ; ಪಿಕ ಪಿಕಃ ಎಂಬ ಸತ್ಯವನ್ನು ! ನಮ್ಮ ಫ್ಯಾಕ್ಟರಿಗಳಲ್ಲಿ ಉತ್ಪಾದಿಸುವ 'ಗುಡ್ಸ್' ಗುಣ ಮಟ್ಟವನ್ನು ಸುಧಾರಿಸಿ, ಲಾಭಾಂಶಗಳನ್ನು ಹೆಚ್ಚಿಸಿ ಕೊಳ್ಳಲು ಹೊಸ ತಂತ್ರ ವಿಧಾನ ಗಳನ್ನು ರೂಪಿಸಿ ಸಲಹೆಗಳನ್ನು ಕೊಡಲು ಅಮೇರಿಕ ಮತ್ತು ಜಪಾನ್ ದೇಶಗಳಲ್ಲಿ Q.C.C. ಗಳನ್ನು ರಚಿಸಿ ಸೂಕ್ತ ರೀತಿಯಲ್ಲಿ ಬಳಸಿ ಕೊಳ್ಳುತ್ತಾರೆಂಬುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೆವು. ನಮ್ಮ ಫ್ಯಾಕ್ಟರಿಗಳಿಗೆ ಟೆರರಿಸಂ, ಸ್ಮಗ್ಲಿಂಗ್ ಮುಂತಾದ ಹೊರ ಸುತ್ತಿನ ಅಪಾಯಗಳು ಇದ್ದರೂ ಅವುಗಳ ನಿವಾರಣೋಪಯಗಳ ಕಡೆ ಗಮನ ಹರಿಸದೆ ಕಾಗೆಗಳ ಉಪಟಳವನ್ನು ನಿಯಂತ್ರಿಸಲು ಫಸ್ಟ್ ಪ್ರಿಫರೆನ್ಸ್ ಕೊಟ್ಟಿರು ವುದು ಕೆಲವು ಕ್ಯಾಂಟೀನ್ ಪ್ರಿಯರ ಸ್ವಂತ ಹಿತಾಸಕ್ತಿಯೆ ಹೊರತು ಬೇರೊಂದಿಲ್ಲ ವೆಂಶ ಅಂಶವು ಸ್ಪಷ್ಟವಾಗಿ ವೇದ್ಯವಾಗುತ್ತದೆ. ಇದು ನಮ್ಮ ಭಾರತ ಸರ್ಕಾರದ ಉದಾರ ಕೈಗಾರಿಕಾ ನೀತಿಗೆ ತದ್ವಿರುದ್ಧವಾಗಿದೆಯೆಂಬ ವಿಷಯವನ್ನು ನಿಮ್ಮ ಗಮನ ಕ್ಕೆ ತರಲು ಆಶಿಸುತ್ತೇನೆ. ಹೋಗಲಿ, ಕ್ಯಾಂಟೀನ್ ತಿಂಡಿ ತಿನಿಸುಗಳ ಕ್ವಾಲಿಟಿ ಮಟ್ಟ ವನ್ನಾದರದ ಉತ್ತಮಗೊಳಿಸಲು Q.C.C ಯವರ ಸಲಹೆ ಕೇಳ ಬಾರದಾಗಿತ್ತೆ ? ಯಾತಕ್ಕೆಂದರೆ ದಿನೇದಿನೇ ಈ ತಿಂಡಿಗಳ ಗುಣಮಟ್ಟವು ಅಧೋಗತಿಗೆ ಇಳಿಯುತ್ತಿದೆ,

ಮೊನ್ನೆ ಮೊನ್ನೆ ಪುಳಿಯೋಗರೆಯಲ್ಲಿ ಪ್ಲೇಟ್ ಒಂದಕ್ಕೆ 5 ಕಡಲೆ ಕಾಯಿ ಬೀಜ ಸಿಗುತ್ತಿದ್ದು ಅದು ಬರು ಬರುತ್ತಾ 4,3,2,1 ರೇಷ್ಯೋ ಪ್ರಕಾರ ಇಳಿ ಮುಖವಾಗುತ್ತಿರುವ ಅಂಶವನ್ನು ಚರ್ಚಿಸಲು Q.C.C. ರಚನೆಯಾಗೇ ಇಲ್ಲ, ಬ್ರೈಸ್ ಸ್ಟ್ರಾರ್ಮಿಂಗ್ ಆಗ ಬೇಕಾಗಿದೆ ! ಸಂಪಾದಕರೆ, ಕಾಗೆಗಳು ಉಂಡ ಮನೆಗೆ ಎರಡು ಬಗೆಯುವಪ್ರಾಣಿಗಳಲ್ಲ, ಅವು ಪ್ರಭಾರವರ ಫ್ಯಾಕ್ಟರಿ ಒಳ ನುಗ್ಗಿ ಫ್ಯಾನುಗಳ ಮೇಲೆ ಕೂತು ಕೊಕ್ಕಿನಿಂದ ಕುಕ್ಕಿದ್ದಕ್ಕಲ್ಲವೆ ಫ್ಯಾನುಗಳು ತಿರುಗುವುದಕ್ಕೆ ಪ್ರಾರಂಭವಾಗಿದ್ದು. ಅಷ್ಟು ದೊಡ್ಡ ಸರ್ಕಾರಿ ಸ್ವಾಮ್ಯದ ಫ್ಯಾಕ್ಟರಿಯಲ್ಲಿ ಮ್ಯಾನೇಜರು ಕೋಲಿನಿಂದ ತಿವಿದು ಫ್ಯಾನುಗಳಿಗೆ ಚಾಲನೆ ಕೊಡುವುದು ಸುಲಭ ಸಾಧ್ಯವಲ್ಲ ! ಇದು ತುಂಬಾ ಹಳೆ ಸಮಸ್ಯೆ. ಫ್ಯಾಕ್ಟರಿಯಲ್ಲಿ ಫ್ಯಾನುಗಳು ಸರಿಯಾಗಿ ಕೆಲಸ ಮಾಡಲು, ಸೂಕ್ತ ಸಲಹೆಗಳನ್ನು ಸೂಚಿಸಲು ಒಂದು ಗುಣ ನಿಯಂತ್ರಣ ವೃತ್ತವನ್ನು ಈ ಹಿಂದೆಯೇ ರಚಿಸಲಾಗಿತ್ತು. ಆ ವೃತ್ತವು ಈ ಸಮಸ್ಯೆಯನ್ನು ಆಮೂಲಾಗ್ರವಾಗಿ ಮಂಥನ ಮಾಡಿ ಫ್ಯಾಕ್ಟರಿ ಸರ ಹದ್ದಿನಲ್ಲಿ ಹಾರಾಡುವ ಕಾಗೆಗಳಿಗೆ ಕ್ಯಾಂಟಿನ್ ಪ್ರವೇಶಕ್ಕೆ ಯಾವ ಅಡ್ಡಿ ಅಡಚಣೆಗಳನ್ನೂ ಉಂಟು ಮಾಡ ಬಾರದೆಂದು ಸಲಹೆ ಕೊಟ್ಟಿತ್ತು. ಆದರೆ ಹೊಸ Q.C C. ಈ ಸಂಗತಿಯನ್ನು ಗಮನಿಸಿದಂತೆ ಕಾಣಿಸುವುದಿಲ್ಲ !

ಇನ್ನೊಂದು ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡದೆ ವಿಧಿಯಿಲ್ಲ. ಕಾಗೆಗಳು ಬರದ ಹಾಗೆ ತೆರೆಗಳನ್ನು ಅಳವಡಿಸಿ ಅವಕ್ಕೆ ಮಂಕು ಬೂದಿ ಎರಚಿದರ ಪರಿಣಾಮವಾಗಿ ಕ್ಯಾಂಟಿನ್ ಒಳ ನೈರ್ಮಲ್ಯ ತುಂಬಾ ಹದ ಗೆಟ್ಟಿದೆ, ಕಾಗೆಗಳು ಸಲೀಸಾಗಿ ತಮ್ಮ ಬಂಧು ಬಳಗಗಳನ್ನು ಕಟ್ಟಿಕೊಂಡು ಬಂದು, ಟೇಬಲ್ಲುಗಳ ಮೇಲೆ ನೆಲದ ಮೇಲೆ ಬಿಸಾಕಲ್ಪಟ್ಟಿದ್ದ ಕರಿ ಬೇವಿನ ಸೊಪ್ಪು, ಕೊತ್ತಂಬರಿ ಸೊಪ್ಪು, ಒಡೆದ ಮೊಟ್ಟೆ, ಕೆಂಪು ಮೆಣಸಿನಕಾಯಿ ಚೂರುಗಳನ್ನು ಅನಾಮತ್ ಕೊಕ್ಕಿನಿಂದ ಎತ್ತಿಕೊಂಡು ಹೋಗುತ್ತಿದ್ದುದರಿಂದ ಕ್ಯಾಂಟೀನಿನ ನೈರ್ಮಲ್ಯದ ಮಟ್ಟವನ್ನು ಚೆನ್ನಾಗಿ ಕಾಪಾಡಿ ಕೊಂಡು ಬರಲು ಸಾಧ್ಯವಾಗಿತ್ತು. ಕ್ಯಾಂಟೀನ್ ಕಂಟ್ರಾಕ್ಟರೂ ತುಂಬಾ ಉದಾರಿ, ರೈಸ್‌ಬಾತ್, ಪೂರಿ ಪಲ್ಯ, ಮೊಸರನ್ನವೆಂಬ ತಿನಿಸುಗಳಿಗೆ ಅಧಿಕ ಪ್ರಮಾಣದಲ್ಲಿ ಕರಿಬೇವಿನ ಸೊಪ್ಪು ಮೆಣಸಿನಕಾಯಿಗಳನು ಏಕೆ ತುಂಬುತ್ತಿದ್ದ ಎಂಬ ರಹಸ್ಯವನ್ನು Q.C.C. ಯವರು ಭೇಧಿಸಲಾರದೆ ಹೋದರು !

ಮುಖ್ಯವಾಗಿ ಕಾಗೆಗಳ ಸಹಯೋಗವನ್ನು ಉಪದ್ರವ ಎಂದು ತಿಳಿದಿದ್ದೇ ದೊಡ್ಡ ಬ್ಲಂಡರ್ ! ಕಾಗೆ ಪಕ್ಷಿ ಕುಲದ ನಿರಾಡಂಭರ ಪ್ರಾಣಿ. ಅದು ಅನಾದಿ ಕಾಲದಿಂದಲೂ ಹಾಡುತ್ತ ಹಾಡುತ್ತ ಮಾಂಸದ ತುಂಡುಗಳನ್ನು ಕಳೆದು ಕೊಂಡು ಜೀವ

ನವಲ್ಲಿ ನಷ್ಟವನ್ನು ಅನುಭವಿಸಿವೆ. ತನ್ನ ಸಂತಾನವನ್ನು ಉಳಿಸಿ ಕೊಳ್ಳಲು ಅತ್ಯಂತ ಕ್ರೂರವಾದ ಕೃಷ್ಣ ಸರ್ಪದ ಮೇಲೆ ಸೇಡು ತೀರಿಸಿ ಕೊಂಡಿದೆ. (ಪ್ರಭಾಕರವರ ಫ್ಯಾಕ್ಟರಿ Q.C.C. ಸದಸ್ಯರು ಸ್ವಲ್ಪ ಎಚ್ಚರಿಕೆಯಿಂದಿರುವುದು ಒಳ್ಳೆಯದು) ಅವು ಗಳ ಬಗ್ಗೆ ಕ್ರೂರ ಮನೋಭಾವ ಸಲ್ಲದು. ವೈದಿಕ ಧರ್ಮದಲ್ಲಿ ಶ್ರದ್ಧೆ ಇರುವವರು ವಾಯಸ ಕುಲವನ್ನು ನಿಕೃಷ್ಟವಾಗಿ ಕಾಣುವ ಹಾಗಿಲ್ಲ. ಅವು ಉಚ್ಚಿಷ್ಟ ಪಿಂಡವನ್ನು ಹುಡಿಕಿ ಕೊಂಡು ಬರುವುದಿಲ್ಲ. ಅವು ಬಂದು ತಿನ್ನಲು ಅನುಕೂಲವಾದ ಸ್ಥಳದಲ್ಲಿ (ವಾಯಸೇಭ್ಯೋದತ್ವಾ) ಪಿಂಡದ ಉಂಡೆಯನ್ನಿಟ್ಟು ನಾವೇ ಕಾ ಕಾ ಕಾ ಎಂದು ಬಾ ಎಂದರೆ ಬರುವುದೂ ಇಲ್ಲ. ಕಾಗೆ ಊಟಕ್ಕೆ ಇಷ್ಟೊಂದು ಮಹತ್ವವಿರುವಾಗ ಅವುಗಳಿಗೆ ಸಲ್ಲ ಬೇಕಾದ ಋಣಾಂಶವನ್ನು ತೆರೆಗಳ ಮೂಲಕ ತಡೆಯುವುದು ನರಕಕ್ಕೆ ದಾರಿ. ಸದಸ್ಯರು ಕ್ರೋ. ಬಿಹೇವಿಯರ್ ಕ್ರೋ ಸೈಕಾಲಜಿಗಳನ್ನು ವ್ಯಾಸಂಗ ಮಾಡದೆ ತಮ್ಮ ಅಜ್ಞಾನದ ತೆರೆಗಳನ್ನು ಇಳಿಬಿಟ್ಟು ಕೊಂಡಿದ್ದಾರೆ.

ಕೆಲವು ಗಂಟೆಗಳ ಹಿಂದೆ ಕೈಗಾರಿಕಾ ಪ್ರಪಂಚದ ಒಂದು ಪತ್ರಿಕೆಯನ್ನು ಓದು ತಿದ್ದೆ. ಅಹಮದಾಬಾದ್ ನಗರದ ಒಂದು ಹತ್ತಿ ಗಿರಣಿಯಲ್ಲಿ ಇಲಿಗಳು ಉಪದ್ರವ ಕೊಡಲು ಪ್ರಾರಂಭಿಸಿತಂತೆ. ಭಯೋತ್ಪಾದಕರಂತೆ ಅವು ಉಗ್ರವಾಗಿ ವರ್ತಿಸಿದವು. ಅಲ್ಲಿಯ ಕೆಲವು ಬುದ್ಧಿವಂತರು ಸೇರಿ ಬ್ರೈನ್ ಸ್ಟಾರ್ಮಿಂಗ್ ನಡೆಸಿದರಂತೆ. ಒಂದು ಗುಣ ನಿಯಂತ್ರಣ ವೃತ್ತವೂ ರಚನೆಯಾಯ್ತಂತೆ. ಅವರು ವಿಶ್ವದ ಮೂಲೆ ಮೂಲೆ ಗಳಿಂದ ಪರಿಹಾರೋಪಾಯಗಳ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ವೈಜ್ಞಾನಿಕ ವಾಗಿ ವಿಶ್ಲೇಶಿಸಿ ಒಂದು ಅಮೂಲ್ಯವಾದ ಸಲಹೆ ಕೊಟ್ಟರಂತೆ. ತಕ್ಷಣ ಫ್ಯಾಕ್ಟರಿಯ ಒಳಗೇ ಬೆಕ್ಕುಗಳ ಮತ್ತು ಕಾಗೆಗಳ ಸಂತಾನವನ್ನು ವೃದ್ಧಿಪಡಿಸ ಬೇಕೆಂದೂ. ಅದ ಕ್ಕೋಸ್ಕರ ಬೆಕ್ಕು ಮತ್ತು ಕಾಗೆಗಳ ಬ್ರೀಡಿಂಗ್ ಕೇಂದ್ರಗಳನ್ನು ಸ್ಥಾಪಿಸ ಬೇಕೆಂದೂ ಉಪಾಯ ಸೂಚಿಸಿದರಂತೆ ಬೆಕ್ಕುಗಳು. ಇಲಿಗಳನ್ನು ಹಿಡಿದು ಧ್ವಂಸ ಮಾಡುವುದಕ್ಕೆ. ಹಾಗೆ ಧ್ವಂಸ ಮಾಡಿದಾಗ ಉಳಿಯುವ ಅವಶೇಷಗಳನ್ನು ಹೊರಕ್ಕೆ ಸಾಗಿಸುವುದಕ್ಕೆ ಕಾಗೆಗಳು ! ಅದನ್ನು ಕ್ಯಾಟ್ ಕಲ್ಚರ್. ಕ್ರೋ ಕಲ್ಚರ್ ಎಂದು ಕರೆದಿದ್ದಾರಂತೆ. ಪೇಪರ್ ಓದುತ್ತಾ ಇದ್ದ ಹಾಗೆ ಮನೆ ಕಾಂಪೌಂಡ್ ಗೋಡೆ ಮೇಲೆ ಎರಡು ಕಾಗೆ ಗಳು ಬಂದು ಕೂತು ಕೊಂಡು ಒಂದೇ ಉಸರಿಗೆ ಕಾಕಾ ಎಂದು ಕೂಗಲು ಪ್ರಾರಂ ಭಿಸಿದವು ಕುಪ್ಪಳಿಸುತ್ತಾ. ಏನೋ ರಹಸ್ಯ ಸಂದೇಶವನ್ನು ಅವು ನನಗೆ ಮುಟ್ಟಿಸಲು ಹವಣಿಸುತ್ತಿದೆ ಎಂದು ಯೋಚಿಸಿದೆ. ಅಷ್ಟು ಹೊತ್ತಿಗೆ ಬಂದ ನಮ್ಮಜ್ಜಿ ಹೇಳಿದರು ಯಾರೋ ದೂರದ ನೆಂಟರು ಮನೆಗೆ ಬರಬಹುದು. ಕಾಗೆಗಳು ನಮ್ಮ ಮನೆ ಮೇಲೆ ಕೂತು ಕೂಗಿಕೊಳ್ಳುತ್ತಿದೆ' ಅಂತ. ಟೆಲಿಕಾಂ ಡಿಪಾರ್ಟ್‌ಮೆಂಟ್ ಸ್ಟ್ರೈಕ್ ನಡೆಯು

ತ್ತಿತ್ತು, ಅಂಚೆದ್ವಾರದಿಂದಲೂ ಕಾಗದ ಮನೆಗೆ ಬಂದಿರಲಿಲ್ಲ. ಅವತ್ತು ಸಂಜೆ ಹೊತ್ತಿಗೆ ನೆಂಟರು ಬಂದೇ ಬಂದರು. ಈಗಲಾದರೂ ಗುಣ ನಿಯಂತ್ರಣ ವೃತ್ತದವರು ತೆರೆಗಳನ್ನು ಕಿತ್ತು ಬಿಸಾಡಿ ಕ್ಯಾಂಟಿನ್ ಒಳಕ್ಕೆ ಕಾಗೆಗಳು ಪ್ರವೇಶಿಸಲು ಮುಕ್ತ ರಹದಾರಿಯನ್ನು ಕಲ್ಪಸಿಕೊಡುತ್ತಾರೆಂದು ಆಶಿಸೋಣವೆ? ಬ್ರೈನ್ ಸ್ಟಾರ್ಮಿಂಗ್ ತಮಗೆ ತುಂಬಾ ಪ್ರಿಯವಂತೆ, ಆದರೂ ಸಂಪಾದಕರೆ, ನಿಮ್ಮ ಬ್ರೈನ್ ತುಂಬಾ ಸ್ಮಾರ್ಟ್ ಎನ್ನಲೆ?


ಇಂತಿ ತಮ್ಮ ವಿಶ್ವಾಸಿ
ಹಾ. ರಾ.

※※ ※※ ※※ ※※

ಶಕ್ತಿ

ಈ ನಾಡಿನಲಿ ಹಿಂದಿದ್ದವು
ಭಜನೆ, ಭಕ್ತಿ;
ಈಗ ತುಳುಕಾಡುತಿವೆ
ಯುಕ್ತಿ, ಕುಯುಕ್ತಿ!
ಹೇ ದೇವ, ನೀಡ ಬಾರದೇ
ಯಾರಾಗಿ ಗಾದರೂ
ಇವನು ತೊಲಗಿಪ ಶಕ್ತಿ?

ರಾ. ಪು. ನಂ.


ಕೋಟಿ ಕೋಟಿ ಗ್ರಾಹಕರ ಸಂತಸವೇ ನಮ್ಮ ಸ್ಫೂರ್ತಿ
ಕೆನರಾ ಬ್ಯಾಂಕ್
(ಭಾರತ ಸರ್ಕಾರದ ಉದ್ದಿಮೆ)
ಪ್ರಧಾನ ಕಚೇರಿ, ಜೆ.ಸಿ. ರಸ್ತೆ, ಬೆಂಗಳೂರು 560 002

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36. 6th Main Road, Malleswaram, Bangalore-560 003. Printed at IMPRESSIONS, 404. Sampige Road, Malleswaram, Bangalore-560 003. Editor : M. SHIVAKUMAR.